# ಜಿಲ್ಲಾ ಕೈಗಾರಿಕಾ ಕೇಂದ್ರ, ಚಿಕ್ಕಮಗಳೂರು.
## ಕರ್ನಾಟಕ ಮಾಹಿತಿ ಪಡೆಯಲು ಹಕ್ಕು ಅಧಿನಿಯಮ 2005 ಕೇಂದ್ರ ನಿಯಮಗಳು-22

**ಸೆಕ್ಷನ್ 4 (1) (ಎ) :-.**

ಚಿಕ್ಕಮಗಳೂರು ಜಿಲ್ಲಾ ಕೈಗಾರಿಕಾ ಕೇಂದ್ರದಲ್ಲಿ ಅನುಷ್ಠಾನಗೊಳಿಸುತ್ತಿರುವ ಕಾರ್ಯಕ್ರಮಗಳು, ಯೋಜನೆಗಳು ಹಾಗೂ ಇನ್ನಿತರ ಮಾಹಿತಿಗಳ ಕಡತಗಳನ್ನು ನಿಗದಿತ ನಮೂನೆಯಲ್ಲಿ ಕ್ರಮಬದ್ಧವಾಗಿ ಸೂಚಿಪಟ್ಟಿ ತಯಾರಿಸಿ ಗಣಕೀಕರಿಸಲಾಗಿದೆ. (ಪಟ್ಟಿ ಲಗತ್ತಿಸಿದೆ)

**ಸೆಕ್ಷನ್ 4 (1) (ಬಿ) (i):- ಕಛೇರಿಯ ರಚನೆ ಕಾರ್ಯಗಳು ಮತ್ತು ಕರ್ತವ್ಯಗಳ ವಿವರಗಳು:**

ಚಿಕ್ಕಮಗಳೂರು ಜಿಲ್ಲಾ ಕೈಗಾರಿಕಾ ಕೇಂದ್ರದ ರಚನೆ ಮತ್ತು ನಿರ್ವಹಿಸುವ ಮುಖ್ಯ ಕೆಲಸ ಕಾರ್ಯಗಳ ವಿವರಗಳು ಈ ಕೆಳಕಂಡಂತಿರುತ್ತವೆ.

ಚಿಕ್ಕಮಗಳೂರು ಜಿಲ್ಲಾ ಕೈಗಾರಿಕಾ ಕೇಂದ್ರವು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಜಿಲ್ಲಾ ಮಟ್ಟದ ಕಾರ್ಯಾಲಯವಾಗಿರುತ್ತದೆ. ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ,ದ ಮುಖ್ಯಸ್ಥರಾಗಿರುತ್ತಾರೆ. ಅವರ ಅಧೀನದಲ್ಲಿ ಉಪ ನಿರ್ದೇಶಕರು, ಇಬ್ಬರು ಸಹಾಯಕ ನಿರ್ದೇಶಕರು, ಓರ್ವ ಅಧೀಕ್ಷಕರು, ಓರ್ವ ಪ್ರಥಮ ದರ್ಜೆ ಸಹಾಯಕರು, ಓರ್ವ ಶೀಘ್ರಲಿಪಿಗಾರರು, ಓರ್ವ ಗಣತಿದಾರರು, ಓರ್ವ ದ್ವಿತೀಯ ದರ್ಜೆ ಸಹಾಯಕರು,ಓರ್ವ ಬೆರಳಚ್ಚುಗಾರರು ಹಾಗೂ ಇಬ್ಬರು ಡಿ ಸಮೂಹದ ನೌಕರರು ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. ಈ ಕಾರ್ಯಾಲಯವು, ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದೆ.

1) ಕೈಗಾರಿಕಾ ನೀತಿಯನ್ವಯ, ಕೈಗಾರಿಕಾ ಘಟಕಗಳಿಗೆ ಉತ್ತೇಜನ ಮತ್ತು ರಿಯಾಯಿತಿಗಳನ್ನು ಒದಗಿಸುವುದು.
2) ವಿದ್ಯಾವಂತ ನಿರುದ್ಯೋಗಿಗಳು ಸ್ವಯಂ ಉದ್ಯೋಗ ಸ್ಥಾಪಿಸಲು ನೆರವಾಗುವ ಪ್ರಧಾನ ಮಂತ್ರಿಗಳ ಉದ್ಯೋಗ ಸೃಜನ ಯೋಜನೆ ಅನುಷ್ಠಾನ.
3) ಕೈಗಾರಿಕಾ ಘಟಕಗಳಿಗೆ ನೋಂದಣಿ ಅವಲೋಕಿಸುವುದು.
4) ಕೈಗಾರಿಕಾ ವಿಚಾರ ಸಂಕಿರಣಗಳು, ಉದ್ಯಮಶೀಲತಾ ಜಾಗೃತಿ ಕಾರ್ಯಕ್ರಮಗಳು, ಉದ್ಯಮಶೀಲತಾ ಪ್ರೇರಣಾ ಕಾರ್ಯಕ್ರಮಗಳು ಮತ್ತು ವಸ್ತುಪ್ರದರ್ಶನಗಳನ್ನು ಏರ್ಪಡಿಸಿ ನಡೆಸುವುದು.
5) ಜಿಲ್ಲೆಯಲ್ಲಿ ಕೈಗಾರಿಕಾಭಿವೃದ್ಧಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಕೈಗಾರಿಕಾ ವಸಾಹತು/ಕೈಗಾರಿಕಾ ಪ್ರದೇಶಕ್ಕೆ ಸ್ಥಳ ಗುರುತಿಸುವುದು ಮತ್ತು ಯೋಜನೆ ರೂಪಿಸುವುದು.
6) ರೋಗಗ್ರಸ್ಥ ಕೈಗಾರಿಕೆಗಳ ಪುನಶ್ಚೇತನಗೊಳಿಸುವುದು.
7) ಕರ್ನಾಟಕ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ, ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ, ಲಿಡ್ಕರ್, ಸಿಡಾಕ್, ಸೂಕ್ಷ್ಮ, ಸಣ್ಣ, ಮಧ್ಯಮ ಉದ್ಯಮಗಳ ಅಭಿವೃದ್ಧಿ ಸಂಸ್ಥೆ, ವಿ.ಐ.ಟಿ.ಸಿ, ನಬಾರ್ಡ, ಕರ್ನಾಟಕ ರಾಜ್ಯ ಕೈಮಗ್ಗ ಅಭಿವೃದ್ಧಿ ನಿಗಮ, ಎಸ್.ಸಿ/ಎಸ್.ಟಿ, ಬಿ.ಸಿ.ಎಂ. ಕಾರ್ಪೋರೇಶನ್ ಮುಂತಾದ ನಿಗಮ/ಮಂಡಳಿಗಳೊಂದಿಗೆ ಸಂಪರ್ಕ ಹೊಂದಿ, ಸಮನ್ವಯ ಸಾಧಿಸುವುದು ಮತ್ತು ವಿವಿಧ ಕಾರ್ಯಕ್ರಮಗಳ ಯೋಜನೆಗಳ ಅನುಷ್ಠಾನಗೊಳಿಸುವಲ್ಲಿ ನೆರವಾಗುವುದು.
8) ಕೈಗಾರಿಕೆಗಳಿಗೆ ಬೇಕಾದ ಕೌಶಲ್ಯ ಮತ್ತು ಬೇಕಾದ ಮೂಲಭೂತ ಸೌಕರ್ಯಗಳನ್ನು ಪಡೆಯುವ ಬಗ್ಗೆ ಕ್ರಿಯಾಯೋಜನೆ ರೂಪಿಸುವುದು.

9) ವಿದ್ಯಾವಂತ ನಿರುದ್ಯೋಗಿಗಳು ಸ್ವಯಂ ಉದ್ಯೋಗ ಸ್ಥಾಪಿಸಲು ನೆರವಾಗುವ ಪ್ರಧಾನ ಮಂತ್ರಿಗಳ ಉದ್ಯೋಗ ಸೃಜನ ಯೋಜನೆ ಅನುಷ್ಠಾನ.

**ಸೆಕ್ಷನ್ 4 (1) ಬಿ (ii):– ಚಿಕ್ಕಮಗಳೂರು ಜಿಲ್ಲಾ ಕೈಗಾರಿಕಾ ಕೇಂದ್ರದ ಅಧಿಕಾರಿಗಳು ಮತ್ತು ನೌಕರರ ಕರ್ತವ್ಯಗಳು.:–**

1. **ಜಂಟಿ ನಿರ್ದೇಶಕರು:–**
   1) ಕೈಗಾರಿಕಾ ನೀತಿಯನ್ವಯ ಕೈಗಾರಿಕಾ ಘಟಕಗಳಿಗೆ ಉತ್ತೇಜನ ಮತ್ತು ರಿಯಾಯಿತಿಗಳನ್ನು ಒದಗಿಸುವುದು.
   2) ವಿದ್ಯಾವಂತ ನಿರುದ್ಯೋಗಿಗಳು ಸ್ವಯಂ ಉದ್ಯೋಗ ಸ್ಥಾಪಿಸಲು ನೆರವಾಗುವ ಪ್ರಧಾನ ಮಂತ್ರಿಗಳ ಉದ್ಯೋಗ ಸೃಜನ ಯೋಜನೆ ಅನುಷ್ಠಾನ.
   3) ವಿದ್ಯಾವಂತ ನಿರುದ್ಯೋಗಿಗಳು ಸ್ವಯಂ ಉದ್ಯೋಗ ಸ್ಥಾಪಿಸಲು ನೆರವಾಗುವ ಮುಖ್ಯ ಮಂತ್ರಿಗಳ ಉದ್ಯೋಗ ಸೃಜನ ಯೋಜನೆ ಅನುಷ್ಠಾನ.
   4) ಕೈಗಾರಿಕಾ ವಿಚಾರ ಸಂಕಿರಣಗಳೂ, ಉದ್ಯಮಶೀಲತಾ ಜಾಗೃತಿ ಕಾರ್ಯಕ್ರಮಗಳು, ಉದ್ಯಮಶೀಲತಾ ಪ್ರೇರಣಾ ಕಾರ್ಯಕ್ರಮಗಳು ಮತ್ತು ವಸ್ತುಪ್ರದರ್ಶನಗಳನ್ನು ಏರ್ಪಡಿಸಿ ನಡೆಸುವುದು.
   5) ಜಿಲ್ಲೆಯಲ್ಲಿ ಕೈಗಾರಿಕಾಭಿವೃದ್ಧಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಕೈಗಾರಿಕಾ ವಸಾಹತು/ಕೈಗಾರಿಕಾ ಪ್ರದೇಶಕ್ಕೆ ಸ್ಥಳ ಗುರುತಿಸುವುದು ಮತ್ತು ಯೋಜನೆ ರೂಪಿಸುವುದು.
   6) ರೋಗಗ್ರಸ್ಥ ಕೈಗಾರಿಕೆಗಳ ಪುನಶ್ಚೇತನಗೊಳಿಸುವುದು.
   7) ಕರ್ನಾಟಕ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಲಿಡ್ಕರ್, ಸಿಡಾಕ್, ಸೂಕ್ಷ್ಮ, ಸಣ್ಣ, ಮಧ್ಯಮ ಉದ್ಯಮಗಳ ಅಭಿವೃದ್ಧಿ ಸಂಸ್ಥೆ, ವಿಐಟಿಸಿ, ನಬಾರ್ಡ್, ಕರ್ನಾಟಕ ರಾಜ್ಯ ಕೈಮಗ್ಗ ಅಭಿವೃದ್ಧಿ ನಿಗಮ, ಎಸ್‌ಸಿ/ಎಸ್‌ಟಿ, ಬಿಸಿಎಂ ಕಾರ್ಪೋರೇಶನ್ ಮುಂತಾದ ನಿಗಮ/ ಮಂಡಳಿಗಳೊಂದಿಗೆ ಸಂಪರ್ಕ ಹೊಂದಿ, ಸಮನ್ವಯ ಸಾಧಿಸುವುದು. ಮತ್ತು ವಿವಿಧ ಕಾರ್ಯಕ್ರಮಗಳ ಯೋಜನೆಗಳ ಅನುಷ್ಠಾನಗೊಳಿಸುವಲ್ಲಿ ನೆರವಾಗುವುದು.
   8) ಕೈಗಾರಿಕೆಗಳಿಗೆ ಬೇಕಾದ ಕೌಶಲ್ಯ ಮತ್ತು ಬೇಕಾದ ಮೂಲಭೂತ ಸೌಕರ್ಯಗಳನ್ನು ಪಡೆಯುವ ಬಗ್ಗೆ ಕ್ರಿಯಾ ಯೋಜನೆ ರೂಪಿಸುವುದು.
   9) ಜಿಲ್ಲಾ ಕೈಗಾರಿಕಾ ಕೇಂದ್ರದ ಡ್ರಾಯಿಂಗ್ ಹಾಗೂ ಬಟವಾಡೆ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುವುದು

2. **ಉಪ ನಿರ್ದೇಶಕರು:–**
   1) ಜಿಲ್ಲಾ ಮಟ್ಟದ ರಿಯಾಯಿತಿ/ಪ್ರೋತ್ಸಾಹ ಸಹಾಯಧನ ಮಂಜೂರಾತಿ ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುವುದು.
   **2)** ಜಿಲ್ಲಾ ಮಟ್ಟದ ಸ್ಕ್ರೀನಿಂಗ್ ಸಮಿತಿ/ರೋಗಗ್ರಸ್ಥ ಕೈಗಾರಿಕೆಗಳ ಪುನಶ್ಚೇತನ ಸಮಿತಿ ಸದಸ್ಯ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುವುದು.
   **3)** ಕ್ರಿಯಾ ಯೋಜನೆ/ಪಂಚ ವಾರ್ಷಿಕ ಯೋಜನೆಯ ಉಸ್ತುವಾರಿ.
   **4)** ಉಧ್ಯಮಿಗಳ ಸಹಾಯಕ ಕೇಂದ್ರ / ಮಾರ್ಗದರ್ಶನ ಕೇಂದ್ರದ ಉಸ್ತುವಾರಿ.
   **5)** ಏಕಗವಾಕ್ಷಿ ಸಮಿತಿ ಸಭೆ, ಕೈಗಾರಿಕಾ ಸ್ಪಂದನ, ಪ್ರಧಾನ ಮಂತ್ರಿಗಳ ಉದ್ಯೋಗ ಸೃಜನ ಯೋಜನೆ ಕಾರ್ಯದಳ ಸಮಿತಿ ಸಭೆಗಳನ್ನು ನಡೆಸಲು ವ್ಯವಸ್ಥೆ ಮಾಡುವುದು ಹಾಗೂ ಅನುಪಾಲನಾ ಕ್ರಮ ಕೈಗೊಳ್ಳುವುದು.

6) ಇಲಾಖಾ ಲೆಕ್ಕಪರಿಶೋಧನಾ/ಮಹಾಲೇಖಪಾಲರ ಲೆಕ್ಕಪರಿಶೋಧನೆ ವಿಲೇವಾರಿಯಲ್ಲಿ ಮಾರ್ಗದರ್ಶನ ನೀಡುವುದು.
7) ಅಧೀನ ಅಧಿಕಾರಿ / ಸಿಬ್ಬಂದಿ ವರ್ಗದವರ ಕೆಲಸ ಕಾರ್ಯಗಳ ಮೇಲ್ವಿಚಾರಣೆ.
8) ಆರ್ಥಿಕ ವಿಷಯಕ್ಕೆ ಸಂಬಂಧಿಸಿದ ಕಡತಗಳಿಗೆ ಅಭಿಪ್ರಾಯ ನೀಡುವುದು ಮತ್ತು ಆಡಳಿತಾತ್ಮಕ ವಿಷಯಗಳನ್ನು ನಿರ್ವಹಿಸುವುದು.
9) ಸಿಬ್ಬಂದಿ ವರ್ಗದವರು ಮಂಡಿಸಿದ ಕಡತಗಳನ್ನು ಪರಿಶೀಲಿಸಿ, ತಮ್ಮ ಅಭಿಪ್ರಾಯದೊಂದಿಗೆ, ಜಂಟಿ ನಿರ್ದೇಶಕರವರಿಗೆ ಸಲ್ಲಿಸುವುದು.

3. **ಸಹಾಯಕ ನಿರ್ದೇಶಕರು:–**

1) ಜಿಲ್ಲಾ ಮಟ್ಟದ ರಿಯಾಯಿತಿ/ಪ್ರೋತ್ಸಾಹ ಸಹಾಯಧನ ಮಂಜೂರಾತಿ ಕಡತಗಳ ನಿರ್ವಹಣೆ.
2) ವಿಶೇಷ ಘಟಕ/ಗಿರಿಜನ ಉಪಯೋಜನೆ/ಇತರೆ ಯೋಜನೆಗಳ ಕಡತ ನಿರ್ವಹಣೆ.
3) ವಸ್ತು ಪ್ರದರ್ಶನ./ ಕೌಶಲ್ಯಾಭಿವೃದ್ಧಿ ತರಬೇತಿ ಕಡತಗಳ ನಿರ್ವಹಣೆ.
4) ಕೆ ಡಿ.ಪಿ. ಮಾಸಿಕ ಪ್ರಗತಿ ವರದಿ/ ತ್ರೈಮಾಸಿಕ ಪ್ರಗತಿ ವರದಿ ಇತ್ಯಾದಿ ಪ್ರಗತಿ ವರದಿಗಳ ಕಡತ ನಿರ್ವಹಣೆ.
5) ಅಬಿವೃದ್ಧಿ ಸಾಲ/ಬೀಜಧನ ಸಾಲ ಕಡತಗಳ ವಿಲೇವಾರಿ ಹಾಗೂ ವಸೂಲಾತಿ ಇತ್ಯಾದಿ
6) ಉದ್ಯಮಶೀಲತಾ ಅಬಿವೃದ್ಧಿ ಕಾರ್ಯಕ್ರಮ/ಜಾಗೃತಿ ಶಿಬಿರ/ಉದ್ಯಮಶೀಲತಾ ಶಿಬಿರಗಳಿಗೆ ಸಂಬಂಧಿಸಿದ ಕಾರ್ಯ ನಿರ್ವಹಣೆ.
7) ಕ್ರಿಯಾ ಯೋಜನೆ, ಮುನ್ನೋಟ ಯೋಜನೆ ತಯಾರಿಕೆ.
8) ಇಲಾಖೆಗೆ ಸಂಬಂಧಿಸಿದ ಎಲ್ಲಾ ಸಮಿತಿ ಸಭೆಗಳನ್ನು ಜರುಗಿಸಲು ಸಹಕರಿಸುವುದು.
9) ಜಿಲ್ಲಾ ವಲಯದ ಯೋಜನೆಗಳು / ಇಲಾಖಾ ತರಬೇತಿ ಸಂಸ್ಥೆಗಳ ಪ್ರಗತಿ ವರದಿಗಳನ್ನು ನಿರ್ವಹಿಸುವುದು.
10) ಏಕಗವಾಕ್ಷಿ ಸಮಿತಿ ಸಭೆಯ ಕಡತಗಳ ನಿರ್ವಹಣೆ.

4. **ಕಛೇರಿ ಅಧೀಕ್ಷಕರು:–**

1) ಇಲಾಖಾ ಲೆಕ್ಕ ಪರಿಶೋಧನಾ ವರದಿಗಳ ವಿಲೇವಾರಿ/ಮಹಾಲೇಖಪಾಲರ ತನಿಖಾ ವರದಿಗಳು
2) ಅಧಿಕಾರಿ / ನೌಕರರ ಮುಂಗಡ / ಸಾಲದ ಅರ್ಜಿಗಳ ನಿರ್ವಹಣೆ.
3) ಕಛೇರಿಗೆ ಬರುವ ಪತ್ರಗಳನ್ನು ತೆರವು ಸಂಬಂಧಿಸಿದ ಸಂಕಲನ ಗುರುತಿಸುವುದು.
4) ಕಾರ್ಯ ನಿರ್ವಹಣಾ ವರದಿಗಳ ಕಡತ ನಿರ್ವಹಣೆ.
5) ಚರಾಸ್ತಿ / ಸ್ತಿರಾಸ್ಥಿ ಕಡತಗಳ ನಿರ್ವಹಣೆ.
6) ಸಿಬ್ಬಂದಿ / ಅಧಿಕಾರಿಗಳ ಹಾಜರಿ ಪುಸ್ತಕಗಳ ನಿರ್ವಹಣೆ.
7) ಸಾಂದರ್ಭಿಕ ರಜೆ ನಿರ್ವಹಣೆ.
8)ವಿಷಯ ನಿರ್ವಾಹಕರು ಮಂಡಿಸಿದ ಕಡತಗಳನ್ನು ಪರಿಶೀಲಿಸಿ ಮೇಲಧಿಕಾರಿಗಳಿಗೆ ಸಲ್ಲಿಸುವುದು.
9) ಸಿಬ್ಬಂದಿ / ಅಧಿಕಾರಿಗಳ ಪ್ರವಾಸ ಪಟ್ಟಿಗಳ ಅನುಮೋದನೆ ವಿಷಯಗಳ ನಿರ್ವಹಣೆ
10) ಕಛೇರಿಯ ಸಾಮಾನ್ಯ ಮೇಲ್ವಿಚಾರಣೆ.
11) ನಿಯತಕಾಲಿಕಗಳ ನಿರ್ವಹಣೆ.

**5. ಪ್ರಥಮ ದರ್ಜೆ ಸಹಾಯಕರು:–**

1. ನಗದು ಪುಸ್ತಕ, ಹಣಕಾಸು ನಿರ್ವಹಣೆ / ಯೋಜನೆಗಳ ಅನುದಾನ/ ಹಣದ ನಿರ್ವಹಣೆ.
2. ಎಲ್ಲಾ ಬಿಲ್ಲುಗಳ ತಯಾರಿಕೆ ಹಾಗೂ ಬಿಲ್ಲುಗಳನ್ನು ಮೇಲುಸಹಿಗೆ ಮಂಡಿಸುವುದು.
3. ಸಿಬ್ಬಂದಿ / ಅಧಿಕಾರಿಗಳ ರಜೆ ಮಂಜೂರಾತಿಗೆ ಮಂಡಿಸುವುದು.

4. ನೇಮಕಾತಿ/ವರ್ಗಾವಣೆ/ಮುಂಬಡ್ತಿ ಆಡಳಿತಕ್ಕೆ ಸಂಬಂಧಿಸಿದ ವಿಷಯಗಳು.
5. ಲಾಗ್ ಪುಸ್ತಕ ನಿರ್ವಹಣೆ.
6. ಸೇವಾ ಪುಸ್ತಕಗಳ ನಿರ್ವಹಣೆ.
7. ಮಾಸಿಕ ವೆಚ್ಚ ಪಟ್ಟಿಗಳು, ಲೆಕ್ಕಗಳ ಮರುಹೊಂದಾಣಿಕೆ ಹಾಗೂ ಮಹಾಲೇಖಪಾಲರ ಕಛೇರಿಯಲ್ಲಿ ಲೆಕ್ಕಗಳ ಮರುಹೊಂದಾಣಿಕೆ ಕೆಲಸ.
8. ಕಛೇರಿ ಕೈಪಿಡಿ ಹಾಗೂ ಕಾರ್ಯ ವಿಧಾನದ ನಿಯಮಗಳಂತೆ ವಹಿಸಿದ ವಿಷಯಗಳ ಕಾರ್ಯವನ್ನು ನಿರ್ವಹಿಸುವುದು.
9. ಪ್ರಧಾನ ಮಂತ್ರಿಗಳ ಉದ್ಯೋಗ ಸೃಜನ ಯೋಜನೆಯ ಪ್ರಗತಿ ವರದಿ/ಕಡತಗಳ ನಿರ್ವಹಣೆ
10. ಅಲ್ಪ ಸಂಖ್ಯಾತರ ಅಭಿವೃದ್ಧಿ ಇಲಾಖೆ / ಮಂಡಳಿ, ಕಾರ್ಯಕ್ರಮಗಳ ಕಡತ ನಿರ್ವಹಣೆ
11. ಕನ್ನಡ ಬಳಕೆ ಸಮೀಕ್ಷಾ ವರದಿ.

**6. <u>ದ್ವಿತೀಯ ದರ್ಜೆ ಸಹಾಯಕರು:–</u>**

1. ಕಛೇರಿ ಪೀಠೋಪಕರಣ ನಿರ್ವಹಣೆ.
2. ಅಂಚೆ ಚೀಟಿಗಳ ಲೆಕ್ಕಗಳ ನಿರ್ವಹಣೆ.
3. ಅಧಿಕಾರಿ ಪ್ರವಾಸ ಭತ್ಯೆ ಬಿಲ್ಲುಗಳ ತಯಾರಿಕೆ.
4. ಸಾರ್ವಜನಿಕ ಕುಂದುಕೊರತೆ ವಿಭಾಗದ ಕೆಲಸ.
5. ಕಛೇರಿಯ ಸಾಮಾನ್ಯ ಸ್ವೀಕೃತಿ ವಿಭಾಗ ನಿರ್ವಹಣೆ.
6. ರವಾನೆ ವಿಭಾಗದ ಕೆಲಸಗಳನ್ನು ನಿರ್ವಹಿಸುವುದು ಹಾಗೂ ಕಛೇರಿ ಕೈಪಿಡಿ ಹಾಗೂ ಕಾರ್ಯವಿಧಾನ ನಿಯಮಗಳಂತೆ ವಹಿಸಿದ ಕೆಲಸಗಳ ಕಾರ್ಯವನ್ನು ನಿರ್ವಹಿಸುವುದು.
7. ಲೇಖನ ಸಾಮಗ್ರಿ ದಾಸ್ತಾನು, ವಿತರಣೆ ಕೆಲಸ ನಿರ್ವಹಣೆ.

**<u>7. ಶೀಘ್ರಲಿಪಿಗಾರರು:–</u>**

1. ಜಂಟಿ ನಿರ್ದೇಶಕರ ಆಪ್ತ ಸಹಾಯಕರಾಗಿ ಕಾರ್ಯ ನಿರ್ವಹಿಸುವುದು. ಉಕ್ತಲೇಖನ ಪಡೆಯುವುದು ಹಾಗೂ ಗಣಕೀಕರಣ/ಬೆರಳಚ್ಚು ಕೆಲಸ ನಿರ್ವಹಿಸುವುದು.
2. ಎಂಎಂಆರ್ ಪ್ರಗತಿ ವರದಿ/ಕಡತ ವಿಲೇವಾರಿ/ಮಾಹಿತಿ ಹಕ್ಕು ಅಧಿನಿಯಮದ ಪ್ರಗತಿ ವರದಿ ತಯಾರಿಸುವುದು.
3. ಗ್ರಂಥಾಲಯ/ ವಾರ್ತಾ ವಿಭಾಗಗಳ ನಿರ್ವಹಣೆ.
4. ಕಛೇರಿಯ ಗಣಕೀಕರಣ ಕಾರ್ಯ ನಿರ್ವಹಣೆ.
5. ಅಧಿಕಾರಿ/ಸಿಬ್ಬಂದಿ ವರ್ಗದವರ ಹೆಚ್.ಆರ್.ಎಂ.ಎಸ್. ಕರ್ತವ್ಯ ನಿರ್ವಹಣೆ.

**<u>8. ಗಣತಿದಾರರು:–</u>**

1. ಉದ್ಯೋಗ ಆಧಾರ / ಉದ್ಯಮ ರಿಜಿಸ್ಟ್ರೇಷನ್ ನಿರ್ವಹಿಸುವುದು.
2.ಜಿಲ್ಲೆಯಲ್ಲಿನ ಕೈಗಾರಿಕೆಗಳ ಸಮೀಕ್ಷೆ / ಗಣತಿ ಕಾರ್ಯದಲ್ಲಿ ಸಹಕರಿಸುವುದು.
3.ಕಚೇರಿಯ ಎಲ್ಲಾ ದಾಖಲಾತಿಗಳನ್ನು ಜಂಟಿ ನಿರ್ದೇಶಕರ ಸೂಚನೆ ಮೇರೆಗೆ ಗಣಕೀಕರಿಸುವುದು.
4.ಜಂಟಿ ನಿರ್ದೇಶಕರು ಸೂಚಿಸಿದ ಕರ್ತವ್ಯ ನಿರ್ವಹಿಸುವುದು.

**<u>7. ಡಿ ಗುಂಪಿನ ನೌಕರರು:–</u>**

ಕಛೇರಿ ಕೆಲಸಕ್ಕೆ ಇಬ್ಬರು ಡಿ ಗುಂಪಿನ ನೌಕರರು ಇರುತ್ತಾರೆ. ಕಛೇರಿಯನ್ನು ಸ್ವಚ್ಛವಾಗಿಡುವುದು, ಕಛೇರಿಯ ಕಡತ/ಟಪಾಲುಗಳನ್ನು ಸಂಬಂಧಿಸಿದ ವಿಭಾಗಗಳಿಗೆ ತಲುಪಿಸುವುದು ಮತ್ತು ವಹಿಸಿದ ಕೆಲಸ ನಿರ್ವಹಿಸುವುದು.

ಮೇಲ್ಕಂಡ ಪದನಾಮದ ಎಲ್ಲಾ ಅಧಿಕಾರಿಗಳು/ಸಿಬ್ಬಂದಿಗಳು ಜಂಟಿ ನಿರ್ದೇಶಕರ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಈ ಕಛೇರಿಯಲ್ಲಿ ನಿರ್ವಹಿಸುವ ಎಲ್ಲಾ ವಿಷಯಗಳ ಬಗ್ಗೆ ಅಂತಿಮ ತೀರ್ಮಾನ ತೆಗೆದುಕೊಳ್ಳುವ ಅಧಿಕಾರ ಜಂಟಿ ನಿರ್ದೇಶಕರದ್ದಾಗಿರುತ್ತದೆ.

**ಸೆಕ್ಷನ್ 4 (ಬಿ) (iii):– ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆಯ ಮಾರ್ಗಗಳು ಸೇರಿದಂತೆ ತೀರ್ಮಾನ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಅನುಸರಿಸುವ ಕಾರ್ಯ ವಿಧಾನ:–**

**ವಿಷಯ ನಿವಾಹಕರು:–** ಹೊಸ ವಿಷಯವಾಗಿದ್ದಲ್ಲಿ, ಕಡತವನ್ನು ತೆರೆದು ಕ್ರಮ ಜರುಗಿಸುವುದು ಅಥವಾ ಇರುವ ಕಡತದಲ್ಲಿ ಕ್ರಮ ಜರುಗಿಸುವುದು.

**ಅಧೀಕ್ಷಕರು:–** ವಿಷಯ ನಿರ್ವಾಹಕರು ಮಂಡಿಸಿದ ಕಡತಗಳನ್ನು ಪರಿಶೀಲಿಸಿ ಸಹಾಯಕ ನಿರ್ದೇಶಕರಿಗೆ ಮಂಡಿಸುವುದು.

**ಸಹಾಯಕ ನಿರ್ದೇಶಕರು –1.**

ಜಿಲ್ಲಾ ಕೈಗಾರಿಕಾ ಕೇಂದ್ರದ ಅಭಿವೃದ್ಧಿ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಲ್ಲಿ, ಯೋಜನೆಯ ನಿಯಮಾನುಸಾರ ಪರಿಶೀಲಿಸಿ, ಕಡತಗಳನ್ನು ಮಂಡಿಸುವುದು. ಉಪ ನಿರ್ದೇಶಕರಿಗೆ ಕಳುಹಿಸುವುದು.

**ಸಹಾಯಕ ನಿರ್ದೇಶಕರು–2:**–ವಿಷಯ ನಿರ್ವಾಹಕರು ಮತ್ತು ಅಧೀಕ್ಷಕರವರಿಂದ ಮಂಡಿಸಲ್ಪಟ್ಟ ಕಡತಗಳನ್ನು ನಿಯಾಮಾನುಸಾರ ಹಾಗೂ ಮಾರ್ಗಸೂಚಿಯಂತೆ ಪರಿಶೀಲಿಸಿ, ಉಪ ನಿರ್ದೇಶಕರವರಿಗೆ ಕಳುಹಿಸುವುದು.

**ಉಪ ನಿರ್ದೇಶಕರು:–** ಸಹಾಯಕ ನಿರ್ದೇಶಕರುಗಳಿಂದ ಮಂಡಿಸಲ್ಪಟ್ಟ ಕಡತ ಪರಿಶೀಲಿಸಿ ನಿಯಾಮಾನುಸಾರ ಹಾಗೂ ಮಾರ್ಗಸೂಚಿಯಂತೆ ಪರಿಶೀಲಿಸಿ, ಜಂಟಿ ನಿರ್ದೇಶಕರವರಿಗೆ ಕಳುಹಿಸುವುದು.

**ಜಂಟಿ ನಿರ್ದೇಶಕರು:–** ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸುವುದು ಮತ್ತು ಅಧಿಕಾರಿ/ಸಿಬ್ಬಂದಿ ವರ್ಗದವರು ಮಂಡಿಸಿದ ಪ್ರಸ್ತಾವನೆಗಳು/ವಿಷಯಗಳ ಬಗ್ಗೆ ನಿರ್ಣಯವನ್ನು ಕೈಗೊಳ್ಳುವುದು.

**ಸೆಕ್ಷನ್ 4 (ಬಿ) (iv):– ಕಾರ್ಯಗಳನ್ನು ನಿರ್ವಹಿಸುವಲ್ಲಿ ರೂಢಿಸಿಕೊಂಡಿರುವ ಕ್ರಮಗಳು:–**

ಸಾರ್ವಜನಿಕರಿಂದ, ಅಧೀನ ಕಛೇರಿಯಿಂದ, ಮೇಲಧಿಕಾರಿಗಳಿಂದ ಹಾಗೂ ಇತರೆ ಇಲಾಖೆಗಳಿಂದ ಬರುವ ಎಲ್ಲಾ ಕಾಗದ ಪತ್ರಗಳನ್ನು ಸಾಮಾನ್ಯ ಸ್ವೀಕೃತಿ ವಿಭಾಗದಲ್ಲಿ ಸ್ವೀಕರಿಸಿ ಜಂಟಿ ನಿರ್ದೇಶಕರವರ ಕಿರು ಸಹಿ ನಂತರ ಸ್ವೀಕೃತಿ ವಹಿಯಲ್ಲಿ ನಮೂದಿಸಿ ಸಂಬಂಧಪಟ್ಟ ವಿಷಯ ನಿರ್ವಾಹಕರಿಗೆ ಸ್ವೀಕೃತಿ ಪಡೆದು ನೀಡಲಾಗುವುದು.

ಕಛೇರಿ ಕೈಪಿಡಿ ರೀತ್ಯಾ ಜನಪ್ರತಿನಿಧಿಗಳ ಹಾಗೂ ತುರ್ತು ಕಾಗದ ಪತ್ರಗಳನ್ನು ಆಧ್ಯತೆ ಮೇರೆಗೆ ಕಛೇರಿ ಟಿಪ್ಪಣಿಯನ್ನು ವಿಷಯ ನಿರ್ವಾಹಕರು ಮಂಡಿಸುತ್ತಾರೆ. ತದನಂತರ ವಿಷಯ ವಹಿಯಲ್ಲಿ ನಮೂದಿಸಿ ಸಂಬಂಧಪಟ್ಟ ಕಡತದಲ್ಲಿ ಟಿಪ್ಪಣಿಯೊಂದಿಗೆ ವಿಷಯ ನಿರ್ವಾಹಕರು/ ಕಛೇರಿ ಅಧೀಕ್ಷಕರುರವರು ಸಹಾಯಕ ನಿರ್ದೇಶಕರಿಗೆ ಮಂಡಿಸುತ್ತಾರೆ. ತರುವಾಯ ಸಹಾಯಕ ನಿರ್ದೆಶಕರು ಉಪ ನಿರ್ದೇಶಕರಿಗೆ ಕಡತ ಮಂಡಿಸುವರು, ಉಪ ನಿರ್ದೇಶಕರು ಜಂಟಿ ನಿರ್ದೇಶಕರವರ ಅನುಮೋದನೆ ಮತ್ತು ತೀರ್ಮಾನಕ್ಕೆ ಮಂಡಿಸುವರು. ಅಂತಿಮ ತೀರ್ಮಾನದ ನಂತರ ಕಾಗದ/ಕಡತ ವಿಲೇವಾರಿಯಾಗುತ್ತದೆ.

ಕಛೇರಿಯ ಎಲ್ಲಾ ವಿಷಯ ನಿರ್ವಾಹಕರು ಕಛೇರಿ ಕಾರ್ಯ ವಿಧಿಸಿದ ರೀತ್ಯಾ 5 ಕಟ್ಟು ವಿಧಾನ ಅಳವಡಿಸಿ ಕಾರ್ಯ ನಿರ್ವಹಿಸುವರು.

**ಸೆಕ್ಷನ್ 4 (ಬಿ) (v):– ಕಾರ್ಯ ನಿರ್ವಹಣೆಯಲ್ಲಿ ಅನುಸರಿಸುವ ಹಾಗೂ ಪಾಲನೆ ಮಾಡುವ ನೀತಿ ನಿಯಮಗಳು, ಕೈಪಿಡಿಗಳು ಹಾಗೂ ದಾಖಲೆಗಳು:**

1) ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ– 1957
2) ಕರ್ನಾಟಕ ಆರ್ಥಿಕ ಸಂಹಿತೆ–1957
3) ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ– 1957 ಸಿಸಿಎ.
4) ಸರ್ಕಾರಕ್ಕೆ ಕಾಲ ಕಾಲಕ್ಕೆ ಪ್ರಕಟಪಡಿಸುವ ಕೈಗಾರಿಕಾ ನೀತಿ.
5) ಸರ್ಕಾರವು ಕಾಲ ಕಾಲಕ್ಕೆ ರೂಪಿಸುವ ನೀತಿ ನಿಯಮಗಳು, ಆದೇಶಗಳು, ಸುತ್ತೋಲೆಗಳು.
6) ಶಾಸನ ಸಭೆಗಳು ತೆಗೆಕುಕೊಳ್ಳುವ ನಿರ್ಣಯದ ಮೇಲಿನ ಆದೇಶಗಳು.

**ಸೆಕ್ಷನ್ 4 (1) ಬಿ (vi):– ಪ್ರಕಾರ ಜಿಲ್ಲಾ ಕೈಗಾರಿಕಾ ಕೇಂದವು ಹೊಂದಿರುವ ದಾಖಲಾತಿಗಳು.**

ಅ) ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ– 1957
ಆ) ಕರ್ನಾಟಕ ಆರ್ಥಿಕ ಸಂಹಿತೆ–1957
ಇ) ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ– 1957 ಸಿಸಿಎ.
ಈ) ಕೈಗಾರಿಕಾ ಉತ್ತೇಜನಾ ಮತ್ತು ರಿಯಾಯಿತಿಗಳ ಮ್ಯಾನುಯಲ್ (ಕರ್ನಾಟಕ ಲಾ ಜನರಲ್ ಮತ್ತು ಪಬ್ಲಿಕೇಷನ್ ರವರು ಪ್ರಕಟಿಸಿರುವುದು)
ಉ) ಕೈಗಾರಿಕಾ ನೀತಿ – 1993–1998
ಊ) ಕೈಗಾರಿಕಾ ನೀತಿ – 1996–2001
ಋ) ಕೈಗಾರಿಕಾ ನೀತಿ – 2001–2006
ಎ) ಕೈಗಾರಿಕಾ ನೀತಿ – 2006–2011
ಏ) ಕೈಗಾರಿಕಾ ನೀತಿ – 2009–2014
ಐ) ಕೈಗಾರಿಕಾ ನೀತಿ – 2014–2019
ಒ)ಕರ್ನಾಟಕ ಕೃಷಿ ಮತ್ತು ಆಹಾರ ಸಂಸ್ಕರಣಾ ನೀತಿ 2015.
ಓ) ಕೈಗಾರಿಕಾ ನೀತಿಗೆ ಮತ್ತು ಅಭಿವೃದ್ಧಿ ಸಂಬಂಧಿಸಿದಂತೆ, ಕಾಲಕಾಲಕ್ಕೆ ಸರ್ಕಾರ ಹೊರಡಿಸಿರುವ ಕೈಗಾರಿಕಾ ನೀತಿಗಳು, ಆದೇಶಗಳು, ಸುತ್ತೋಲೆಗಳು.
ಔ) ಕೈಗಾರಿಕಾ ಮುನ್ನೋಟ ಯೋಜನೆ, ಉದ್ಯಮಶೀಲರ ಕೈಪಿಡಿ
ಅಂ) ಉದ್ಯಮಶೀಲರ ಉಪಯೋಗಕ್ಕಾಗಿ ವಾರ್ತಾ ಕೇಂದ್ರದಲ್ಲಿ ಲಭ್ಯವಿರುವ ಮ್ಯಾಗ್‌ಜೈನ್‌ಗಳು, ಪುಸ್ತಕಗಳು, ಪ್ರಾಜೆಕ್ಟ್ ಪ್ರೊಫೈಲ್‌ಗಳು ಇತ್ಯಾದಿ.

**ಸೆಕ್ಷನ್ 4 (1) ಬಿ (vii) ನೀತಿ ನಿಯಮಗಳನ್ನು ರೂಪಿಸಲು ಹಾಗೂ ಅನುಷ್ಠಾನಗೊಳಿಸಲು ಸಾರ್ವಜನಿಕರ ಸಂಪರ್ಕಕ್ಕಾಗಿ ಮತ್ತು ಸಮಾಲೋಚನೆಗಾಗಿ ವ್ಯವಸ್ಥೆ.**

1 .ಜಿಲ್ಲಾ ಕೈಗಾರಿಕಾ ಕೇಂದ್ರ ಕಛೇರಿಯಲ್ಲಿ ಕುಂದುಕೊರತೆಗಳ ವಿಭಾಗ ತೆರೆಯಲಾಗಿದೆ. ಕುಂದುಕೊರತೆಗಳ ನಿವಾರಣೆ ಬಗ್ಗೆ ಅಗತ್ಯ ಮಾಹಿತಿಯನ್ನು ನೀಡಲಾಗುತ್ತಿದೆ. ಹಾಗೂ ಸೂಕ್ತ ಹಿಂಬರಹಗಳನ್ನು ಸಹ ಅರ್ಜಿದಾರರಿಗೆ ತಿಳಿಸಲಾಗುತ್ತಿದೆ.

2. ಮಾಹಿತಿ ಪಡೆಯಲು ಮಾಹಿತಿ ಹಕ್ಕು ಅಧಿನಿಯಮ 2005 ರಂತೆ ಜಿಲ್ಲಾ ಕೈಗಾರಿಕಾ ಕೇಂದ್ರ, ಚಿಕ್ಕಮಗಳೂರಿನಲ್ಲಿ ಸಹಾಯಕ ನಿರ್ದೇಶಕರನ್ನು ಸಾರ್ವಜನಿಕ ಮಾಹಿತಿ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಾರೆ., ಅಧೀಕ್ಷಕರು, ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಯವರಾಗಿರುತ್ತಾರೆ. ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಚಿಕ್ಕಮಗಳೂರು, ಇವರು ಮೇಲ್ಮನವಿ ಪ್ರಾಧಿಕಾರವಾಗಿರುತ್ತಾರೆ.

**ಸೆಕ್ಷನ್ 4 (1) ಬಿ (viii):– ಜಿಲ್ಲಾ ಕೈಗಾರಿಕಾ ಕೇಂದ್ರದಲ್ಲಿ ಯೋಜನೆಗಳ ಅನುಷ್ಠಾನಕ್ಕಾಗಿ ಸಲಹೆಗಾಗಿ ಇರುವ ಎರಡು ಅಥವಾ ಹೆಚ್ಚಿನ ಸದಸ್ಯರಿರುವ ಸಮಿತಿಗಳು, ಈ ಸಮಿತಿಗಳ ಬಗ್ಗೆ ಇರುವ ವಿವರಗಳು ಮತ್ತು ಅವುಗಳು ನಡೆಸುವ ಸಭೆಗೆ, ಸಾರ್ವಜನಿಕರಿಗೆ ಮುಕ್ತಾವಳಿ ಅಥವಾ ಸಭಾ ನಡವಳಿಕೆ ಲಭ್ಯತೆ ಬಗ್ಗೆ ಇರುವ ವ್ಯವಸ್ಥೆ:–**

ಜಿಲ್ಲಾ ಕೈಗಾರಿಕಾ ಕೇಂದ್ರದಲ್ಲಿ ಈ ಕೆಳಕಂಡ ಸಮಿತಿಗಳಿರುತ್ತವೆ.

## 1. ಜಿಲ್ಲಾ ಮಟ್ಟದ ರಿಯಾಯಿತಿ/ಪ್ರೋತ್ಸಾಹಧನ ಮಂಜೂರಾತಿ ಸಮಿತಿ:–

ಚಿಕ್ಕಮಗಳೂರು ಜಿಲ್ಲಾ ಕೈಗಾರಿಕಾ ಕೇಂದ್ರದಲ್ಲಿ ಜಿಲ್ಲಾ ಮಟ್ಟದ ರಿಯಾಯಿತಿ/ಪ್ರೋತ್ಸಾಹಧನ ಮಂಜೂರಾತಿ ಸಮಿತಿಯು ಈ ಕೆಳಕಂಡವರನ್ನು ಒಳಗೊಂಡಿರುತ್ತದೆ.

| | |
|---|---|
| 1) ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ,ಚಿಕ್ಕಮಗಳೂರು | ಅಧ್ಯಕ್ಷರು |
| 2) ಶಾಖಾ ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ, ಚಿಕ್ಕಮಗಳೂರು. | ಸದಸ್ಯರು |
| 3) ಜಿಲ್ಲಾ ಮುನ್ನಡೆ ಬ್ಯಾಂಕ್ ವ್ಯವಸ್ಥಾಪಕರು, ಕಾರ್ಪೋರೇಶನ್ ಬ್ಯಾಂಕ್, | ಸದಸ್ಯರು |
| 4) ಉಪನಿರ್ದೇಶಕರು (ಖಾಗ್ರಾ), ಗ್ರಾಮೀಣ ಕೈಗಾರಿಕೆ ವಿಭಾಗ,ಜಿ.ಪಂ ಪ್ರತಿನಿಧಿ | ಸದಸ್ಯ.ರು |
| 5) ಉಪ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಚಿಕ್ಕಮಗಳೂರು. | ಸದಸ್ಯ ಕಾರ್ಯದರ್ಶಿ |

ಈ ಸಮಿತಿಯು ರಾಜ್ಯ ಸಹಾಯಧನ ಮಂಜೂರಾತಿ ಕೋರಿ ಬರುವ ಕೈಗಾರಿಕಾ ಘಟಕಗಳ ಅರ್ಜಿಗಳನ್ನು/ಪ್ರಸ್ತಾವನೆಗಳನ್ನು ಪರಿಶೀಲಿಸಿ, ಅವು ಸ್ಥಿರಾಸ್ತಿಯ ಮೇಲೆ ತೊಡಗಿಸುವ ಬಂಡವಾಳದ ಮೇಲೆ, ಕೈಗಾರಿಕಾ ನೀತಿ ನಿಯಮ ಅಂಗೀಕಾರ್ಹ ಸಹಾಯಧನವನ್ನು ಮಂಜೂರು ಮಾಡುವುದು.

## 2. ಜಿಲ್ಲಾ ಮಟ್ಟದ ಸ್ಕ್ರೀನಿಂಗ್ ಸಮಿತಿ:–

ಚಿಕ್ಕಮಗಳೂರು ಜಿಲ್ಲಾ ಕೈಗಾರಿಕಾ ಕೇಂದ್ರದಲ್ಲಿ ಜಿಲ್ಲಾ ಮಟ್ಟದ ಸ್ಕ್ರೀನಿಂಗ್ ಸಮಿತಿ ಇದ್ದು, ಸಮಿತಿಯು ಈ ಕೆಳಕಂಡವರನ್ನು ಒಳಗೊಂಡಿರುತ್ತದೆ.

| | |
|---|---|
| 1) ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಚಿಕ್ಕಮಗಳೂರು | ಅಧ್ಯಕ್ಷರು |
| 2) ಶಾಖಾ ವ್ಯವಸ್ಥಾಪಕರು, ಕೆ.ಎಸ್.ಎಫ್.ಸಿ ಚಿಕ್ಕಮಗಳೂರು | ಸದಸ್ಯರು |
| 3) ಉಪ ಮುಖ್ಯ ವ್ಯವಸ್ಥಾಪಕರು, ಕೆ.ಎಸ್.ಎಸ್.ಐ.ಡಿ.ಸಿ. ಶಿವಮೊಗ್ಗ. | ಸದಸ್ಯರು |
| 2) ಕಾರ್ಯಪಾಲಕ ಅಭಿಯಂತರರು, ಮೆಸ್ಕಾಂ, .ಚಿಕ್ಕಮಗಳೂರು | ಸದಸ್ಯರು |
| 4) ಅಭಿವೃದ್ಧಿ ಅಧಿಕಾರಿ, ಕೆ.ಐ.ಎ.ಡಿ.ಬಿ. ಹಾಸನ | ಸದಸ್ಯರು |
| 5) ಜಿಲ್ಲಾ ಮುನ್ನಡೆ ಬ್ಯಾಂಕ್ ವ್ಯವಸ್ಥಾಪಕರು, ಚಿಕ್ಕಮಗಳೂರು | ಸದಸ್ಯರು |
| 6) ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಚಿಕ್ಕಮಗಳೂರು | ಸದಸ್ಯರು |
| 7) ಪರಿಸರ ಅಧಿಕಾರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ,ಚಿಕ್ಕಮಗಳೂರು | ಸದಸ್ಯರು |
| 8) ಸಹಾಯಕ ನಿರ್ದೇಶಕರು, ಕಾರ್ಖಾನೆಗಳು, ಹಾಸನ. | ಸದಸ್ಯರು |
| 9) ಉಪ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಚಿಕ್ಕಮಗಳೂರು. | ಸದಸ್ಯ ಕಾರ್ಯದರ್ಶಿ |

ಏಕಗವಾಕ್ಷಿ ಸಮಿತಿ ಸಭೆಗೆ ಕೊಂಡೊಯ್ಯುವ ಪ್ರಸ್ತಾವನೆಗಳನ್ನು ಪೂರ್ವಭಾವಿಯಾಗಿ ಸ್ಕ್ರೀನಿಂಗ್ ಸಮಿತಿ ಸಭೆಯಲ್ಲಿ ಚರ್ಚಿಸಿ ನಿರ್ಣಯ ಕೈಗೊಳ್ಳಲಾಗುವುದು.

**3. ಏಕ ಗವಾಕ್ಷಿ ಸಮಿತಿ:–**

ಜಿಲ್ಲಾ ಮಟ್ಟದ ಏಕ ಗವಾಕ್ಷಿ ಸಮಿತಿ ಇದ್ದು, ಸಮಿತಿಯು ಈ ಕೆಳಕಂಡವರನ್ನು ಒಳಗೊಂಡಿರುತ್ತದೆ.

1) ಮಾನ್ಯ ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು ಅಧ್ಯಕ್ಷರು
2) ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು, ಜಿ.ಪಂ. ಚಿಕ್ಕಮಗಳೂರು. ಉಪಾಧ್ಯಕ್ಷರು
3) ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಚಿಕ್ಕಮಗಳೂರು ಸದಸ್ಯ ಕಾರ್ಯದರ್ಶಿ
4) ಶಾಖಾ ವ್ಯವಸ್ಥಾಪಕರು, ಕೆ.ಎಸ್.ಎಫ್.ಸಿ ಚಿಕ್ಕಮಗಳೂರು ಸದಸ್ಯರು
5) ಉಪ ಮುಖ್ಯ ವ್ಯವಸ್ಥಾಪಕರು, ಕೆ.ಎಸ್.ಎಸ್.ಐ.ಡಿ.ಸಿ. ಶಿವಮೊಗ್ಗ. ಸದಸ್ಯರು
6) ಕಾರ್ಯಪಾಲಕ ಅಭಿಯಂತರರು, ಮೆಸ್ಕಾಂ, .ಚಿಕ್ಕಮಗಳೂರು ಸದಸ್ಯರು
7) ಅಭಿವೃದ್ಧಿ ಅಧಿಕಾರಿ, ಕೆ.ಐ.ಡಿ.ಬಿ. ಹಾಸನ ಸದಸ್ಯರು
8) ಜಿಲ್ಲಾ ಮುನ್ನಡೆ ಬ್ಯಾಂಕ್ ವ್ಯವಸ್ಥಾಪಕರು, ಚಿಕ್ಕಮಗಳೂರು ಸದಸ್ಯರು
9) ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಚಿಕ್ಕಮಗಳೂರು ಸದಸ್ಯರು
10) ಪರಿಸರ ಅಧಿಕಾರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ,ಚಿಕ್ಕಮಗಳೂರು ಸದಸ್ಯರು
11) ಸಹಾಯಕ ನಿರ್ದೇಶಕರು ಕಾರ್ಖಾನೆಗಳು, ಶಿವಮೊಗ್ಗ. ಸದಸ್ಯರು
12) ನಗರ ಯೋಜನಾ ಸಹಾಯಕ ನಿರ್ದೇಶಕರು, ಚಿಕ್ಕಮಗಳೂರು. ಸದಸ್ಯರು
13) ಜಿಲ್ಲಾ ಕಾರ್ಮಿಕ ಅಧಿಕಾರಿ, ಚಿಕ್ಕಮಗಳೂರು. ಸದಸ್ಯರು
14) ಪೌರ ಆಯುಕ್ತರು, ನಗರಸಭೆ, ಚಿಕ್ಕಮಗಳೂರು. ಸದಸ್ಯರು
15) ಜಿಲ್ಲಾ ಅಧಿಕಾರಿ, ಕೆ.ವಿ.ಐ.ಬಿ. ಚಿಕ್ಕಮಗಳೂರು. ಸದಸ್ಯರು
16) ಅಧ್ಯಕ್ಷರು/ಕಾರ್ಯದರ್ಶಿ, ಜಿಲ್ಲಾ ಕೈಗಾರಿಕೋದ್ಯಮಿಗಳ ಸಂಘ, ಚಿಕ್ಕಮಗಳೂರು ಸದಸ್ಯರು

ಈ ಸಮಿತಿಯು, ಹೊಸ ಕೈಗಾರಿಕಾ ಘಟಕಗಳಿಗೆ ಅನುಮೋದನೆ ನೀಡುವುದು, ನಿವೇಶನ, ಮಳಿಗೆ, ಸ್ಥಳ ಹಂಚಿಕೆ ಮಾಡಲು ನಿರ್ಣಯ ಕೈಗೊಳ್ಳುವುದು, ಕೈಗಾರಿಕಾ ಘಟಕಗಳ ಸ್ಥಾಪನೆಗೆ ಅಡ್ಡಿ ಆತಂಕಗಳು/ ತೊಂದರೆಗಳಿದ್ದಲ್ಲಿ ಅವುಗಳ ಬಗ್ಗೆ ಚರ್ಚಿಸಿ, ನಿವಾರಿಸಲು ಕ್ರಮ ಕೈಗೊಳ್ಳುವುದು ಮತ್ತು ರೋಗಗ್ರಸ್ಥ ಕೈಗಾರಿಕೆಗಳ ಪುನಶ್ಚೇತನಕೆ ಸರ್ಕಾರದ ನೀತಿ ನಿಯಮದಂತೆ, ಮಾರ್ಜಿನ್ ಹಣ ಸಹಾಯ, ಮಾರಾಟಕರ ರಿಯಾಯಿತಿಗಳು, ಕರ್ನಾಟಕ ವಿದ್ಯುತ್ ಮಂಡಳಿಯಿಂದ ಪರಿಹಾರ, ಅಭಿವೃದ್ಧಿ ಸಾಲದ ಪುನರ್ ನಿಗದಿಗೊಳಿಸಿ ನೆರವು ಒದಗಿಸುವುದು.

**4. ಪಿಎಂಇಜಿಪಿ ಟಾಸ್ಕಫೋರ್ಸ್ ಸಮಿತಿ**

ಚಿಕ್ಕಮಗಳೂರು ಜಿಲ್ಲಾ ಕೈಗಾರಿಕಾ ಕೇಂದ್ರದಲ್ಲಿ ಪ್ರಧಾನ ಮಂತ್ರಿಗಳ ಉದ್ಯೋಗ ಸೃಜನ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದ್ದು, ಜಿಲ್ಲಾ ಮಟ್ಟದ ಟಾಸ್ಕ್‌ಫೋರ್ಸ ಸಮಿತಿಯು ಈ ಕೆಳಕಂಡವರನ್ನು ಒಳಗೊಂಡಿರುತ್ತದೆ.

1) ಮಾನ್ಯ ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು ಅಧ್ಯಕ್ಷರು
2) ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಚಿಕ್ಕಮಗಳೂರು ಸದಸ್ಯ ಕಾರ್ಯದರ್ಶಿ
3) ಜಿಲ್ಲಾ ಮುನ್ನಡೆ ಬ್ಯಾಂಕ್ ವ್ಯವಸ್ಥಾಪಕರು, ಚಿಕ್ಕಮಗಳೂರು., ಸದಸ್ಯರು
4) ಜಿಲ್ಲಾ ಖಾದಿ ಮತ್ತು ಗ್ರಾಮೋದ್ಯೋಗಾಧಿಕಾರಿ, ಚಿಕ್ಕಮಗಳೂರು (ಪ್ರತಿನಿಧಿ) ಸದಸ್ಯರು
5) ಜಿಲ್ಲಾ ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ, ಬೆಂಗಳೂರು (ಪ್ರತಿನಿಧಿ) ಸದಸ್ಯರು
6) ಜಿಲ್ಲಾ ಅಧಿಕಾರಿ, ಡಾ:ಬಿ.ಆರ್.ಅಂಬೇಡ್ಕರ್ ಡೆವೆಲಪ್‌ಮೆಂಟ್ ಕಾರ್ಪೋರೇಶನ್, ಚಿಕ್ಕಮಗಳೂರು. ಸದಸ್ಯರು
7) ನಿರ್ದೇಶಕರು, ಮೈಕ್ರೋ, ಸ್ಮಾಲ್ & ಮೀಡಿಯಂ ಎಂಟರ್‌ಪ್ರೈಸಸ್ ಡೆವಲಪ್‌ಮೆಂಟ್ ಇನ್ಸ್‌ಟಿಟ್ಯೂಟ್ ರಾಜಾಜಿನಗರ, ಬೆಂಗಳೂರು–44 (ಪ್ರತಿನಿಧಿ) ಸದಸ್ಯರು
8) ಪ್ರಾಂಶುಪಾಲರು, ಡಿ.ಎ.ಸಿ.ಜಿ. ಪಾಲಿಟೆಕ್ನಿಕ್, ಚಿಕ್ಕಮಗಳೂರು ಸದಸ್ಯರು

9) ನಾಮನಿರ್ದೇಶಿತ ಪಂಚಾಯಿತಿ ಪ್ರತಿನಿಧಿಗಳು 03 ಜನ ಸದಸ್ಯರು

2019-20ನೇ ಸಾಲಿನ ಪ್ರಧಾನ ಮಂತ್ರಿಗಳ ಉದ್ಯೋಗ ಸೃಜನ ಯೋಜನೆಯಡಿ ಚಿಕ್ಕಮಗಳೂರು ಜಿಲ್ಲೆಗೆ 42 ಭೌತಿಕ 126.00 ಲಕ್ಷಗಳ ಅಂಚುಹಣ ಮತ್ತು 336 ಜನರಿಗೆ ಉದ್ಯೋಗ ಸೃಷ್ಠಿ ಗುರಿ ನೀಡಲಾಗಿತ್ತು. ಅದರಂತೆ 128 ಜನರಿಂದ ಅರ್ಜಿಗಳನ್ನು ಸ್ವೀಕರಿಸಲಾಯಿತು. ಸದರಿ ಅಬ್ಯರ್ಥಿಗಳನ್ನು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಇರುವ ಜಿಲ್ಲಾ ಮಟ್ಟದ ಪಿಎಂಇಜಿಪಿ ಟಾಸ್ಕ್‌ಫೋರ್ಸ್ ಸಮಿತಿಯ ಮೂಲಕ ಸಂದರ್ಶನ ಜರುಗಿಸಿ ಅರ್ಹ 187 ಅರ್ಜಿಗಳನ್ನು ಸಂಬಂಧಪಟ್ಟ ಬ್ಯಾಂಕುಗಳಿಗೆ ಶಿಫಾರಸ್ಸು ಮಾಡಲಾಗಿತ್ತು. ಅದರಂತೆ 39 ಅಬ್ಯರ್ಥಿಗಳಿಗೆ ರೂ. 143.57 ಲಕ್ಷ ಸಾಲ ಮಂಜೂರಾತಿಯಾಗಿದ್ದು ರೂ.51.87 ಲಕ್ಷ ಅಂಚು ಹಣ ಒಳಗೊಂಡಿರುತ್ತದೆ.

## 5. ಸಿಎಂಇಜಿಪಿ ಟಾಸ್ಕ್‌ಫೋರ್ಸ್ ಸಮಿತಿ

ಚಿಕ್ಕಮಗಳೂರು ಜಿಲ್ಲಾ ಕೈಗಾರಿಕಾ ಕೇಂದ್ರದಲ್ಲಿ ಮುಖ್ಯ ಮಂತ್ರಿಗಳ ಉದ್ಯೋಗ ಸೃಜನ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದ್ದು, ಜಿಲ್ಲಾ ಮಟ್ಟದ ಟಾಸ್ಕ್‌ಫೋರ್ಸ ಸಮಿತಿಯು ಈ ಕೆಳಕಂಡವರನ್ನು ಒಳಗೊಂಡಿರುತ್ತದೆ.

1) ಮಾನ್ಯ ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು ಅಧ್ಯಕ್ಷರು
2) ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಚಿಕ್ಕಮಗಳೂರು ಸದಸ್ಯ ಕಾರ್ಯದರ್ಶಿ
3) ಜಿಲ್ಲಾ ಮುನ್ನಡೆ ಬ್ಯಾಂಕ್ ವ್ಯವಸ್ಥಾಪಕರು, ಚಿಕ್ಕಮಗಳೂರು., ಸದಸ್ಯರು
4) ಜಿಲ್ಲಾ ಖಾದಿ ಮತ್ತು ಗ್ರಾಮೋದ್ಯೋಗಾಧಿಕಾರಿ, ಚಿಕ್ಕಮಗಳೂರು (ಪ್ರತಿನಿಧಿ) ಸದಸ್ಯರು
6) ಜಿಲ್ಲಾ ಅಧಿಕಾರಿ, ಡಾ:ಬಿ.ಆರ್.ಅಂಬೇಡ್ಕರ್ ಡೆವೆಲಪ್‌ಮೆಂಟ್ ಕಾರ್ಪೋರೇಶನ್, ಚಿಕ್ಕಮಗಳೂರು. ಸದಸ್ಯರು
7) ನಿರ್ದೇಶಕರು, ಮೈಕ್ರೋ, ಸ್ಮಾಲ್ & ಮೀಡಿಯಂ ಎಂಟರ್‌ಪ್ರೈಸಸ್ ಡೆವಲಪ್‌ಮೆಂಟ್ ಇನ್ಸ್‌ಟಿಟ್ಯೂಟ್ ರಾಜಾಜಿನಗರ, ಬೆಂಗಳೂರು-44 (ಪ್ರತಿನಿಧಿ) ಸದಸ್ಯರು
8) ಉದ್ಯೋಗಾಧಿಕಾರಿ, ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಚಿಕ್ಕಮಗಳೂರು. ಸದಸ್ಯರು
9) ಜಿಲ್ಲಾ ಅಧಿಕಾರಿ, ಪರಿಶಿಷ್ಠ ಪಂಗಡ ಅಭಿವೃದ್ದಿ ನಿಗಮ, ಜಿಪಂ, ಚಿಕ್ಕಮಗಳೂರು. ಸದಸ್ಯರು
10)ನಿರ್ದೇಶಕರು, ಕಾಬ್‌ಸೆಟಿ ಸಂಸ್ಥೆ, ಚಿಕ್ಕಮಗಳೂರು. ಸದಸ್ಯರು
11)ಉಪ ನಿರ್ದೇಶಕರು (ಖಾಗ್ರಾ), ಜಿಪಂ, ಚಿಕ್ಕಮಗಳೂರು. ಸದಸ್ಯರು

2019-20ನೇ ಸಾಲಿನ ಮುಖ್ಯ ಮಂತ್ರಿಗಳ ಉದ್ಯೋಗ ಸೃಜನ ಯೋಜನೆಯಡಿ ಚಿಕ್ಕಮಗಳೂರು ಜಿಲ್ಲೆಗೆ 38 ಭೌತಿಕ ರೂ.76.00 ಲಕ್ಷಗಳ ಅಂಚುಹಣ ಮತ್ತು 114 ಜನರಿಗೆ ಉದ್ಯೋಗ ಸೃಷ್ಠಿ ಗುರಿ ನೀಡಲಾಗಿತ್ತು. ಅದರಂತೆ 438 ಜನರಿಂದ ಅರ್ಜಿಗಳನ್ನು ಸ್ವೀಕರಿಸಲಾಯಿತು. ಸದರಿ ಅಬ್ಯರ್ಥಿಗಳನ್ನು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಇರುವ ಜಿಲ್ಲಾ ಮಟ್ಟದ ಸಿಎಂಇಜಿಪಿ ಟಾಸ್ಕ್‌ಫೋರ್ಸ್ ಸಮಿತಿಯ ಮೂಲಕ ಸಂದರ್ಶನ ಜರುಗಿಸಿ ಅರ್ಹ 102 ಅರ್ಜಿಗಳನ್ನು ಸಂಬಂಧಪಟ್ಟ ಬ್ಯಾಂಕುಗಳಿಗೆ ಶಿಫಾರಸ್ಸು ಮಾಡಲಾಗಿತ್ತು. ಅದರಂತೆ 18 ಅಬ್ಯರ್ಥಿಗಳಿಗೆ ಅಂಚು ಹಣ ರೂ. 109.60 ಮಂಜೂರಾತಿಯಾಗಿದ್ದು 14 ಫಲಾನುಭವಿಗಳಿಗೆ ಸಾಲ ಬಿಡುಗಡೆಯಾಗಿರುತ್ತದೆ.

**6. ರೋಗಗ್ರಸ್ಥ ಕೈಗಾರಿಕೆಗಳ ಜಿಲ್ಲಾ ಮಟ್ಟದ ಪುನಶ್ಚೇತನಾ ಟಾಸ್ಕ್ ಫೋರ್ಸ್ ಸಮಿತಿ.**

ರೋಗಗ್ರಸ್ಥ ಕೈಗಾರಿಕೆಗಳ ಜಿಲ್ಲಾ ಮಟ್ಟದ ಪುನಶ್ಚೇತನಾ ಟಾಸ್ಕ್‌ಫೋರ್ಸ್ ಸಮಿತಿಯು ಈ ಕೆಳಕಂಡವರನ್ನು ಒಳಗೊಂಡಿರುತ್ತದೆ.

1) ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಚಿಕ್ಕಮಗಳೂರು — ಅಧ್ಯಕ್ಷರು
2) ಜಿಲ್ಲಾ ಮುನ್ನಡೆ ಬ್ಯಾಂಕ್ ವ್ಯವಸ್ಥಾಪಕರು, ಚಿಕ್ಕಮಗಳೂರು., — ಸದಸ್ಯರು
3) ವ್ಯವಸ್ಥಾಪಕರು, ಕೆ.ಎಸ್.ಎಫ್.ಸಿ. ಚಿಕ್ಕಮಗಳೂರು. — ಸದಸ್ಯರು
4) ಸಂಬಂಧಪಟ್ಟ ಬ್ಯಾಂಕಿನ ಪ್ರತಿನಿದಿ., ಚಿಕ್ಕಮಗಳೂರು. — ಸದಸ್ಯರು
5) ಉಪ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಚಿಕ್ಕಮಗಳೂರು. — ಸದಸ್ಯ ಕಾರ್ಯದರ್ಶಿ

ರೋಗಗ್ರಸ್ಥ ಕೈಗಾರಿಕೆಗಳ ಜಿಲ್ಲಾ ಮಟ್ಟದ ಪುನಶ್ಚೇತನಾ ಟಾಸ್ಕ್‌ಫೋರ್ಸ್ ಸಮಿತಿಯ ಕಾರ್ಯಗಳು ಈ ಕೆಳಗಿನಂತಿವೆ.

1) ಭಾರತೀಯ ರಿಸರ್ವ ಬ್ಯಾಂಕಿನ ನಿಯಮಾನುಸಾರ ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ರೋಗಗ್ರಸ್ಥವೆಂದು ಗುರ್ತಿಸುವುದು.
2) ಈ ಯೋಜನೆಯಡಿಯಲ್ಲಿ ಸವಲತ್ತು ಪಡೆಯಬೇಕಾದ ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ರೋಗಗ್ರಸ್ಥವೆಂದು ಪ್ರಮಾಣೀಕರಿಸುವುದು.
3) ಸಂಬಂಧಪಟ್ಟ ಸಣ್ಣ ಪ್ರಮಾಣದ ಕೈಗಾರಿಕೆಯ ಸಾಧ್ಯತಾ ಮತ್ತು ಸಂಭವನೀಯ ವರದಿಯನ್ನು ಸಂಬಂಧಿಸಿದ ಬ್ಯಾಂಕುಗಳಿಂದ ಪಡೆಯುವುದು.
4) ಮಂಜೂರು ಮಾಡಬೇಕಾದ ಮಾರ್ಜಿನ್ ಹಣದ ಮೊತ್ತವನ್ನು ಜಿಲ್ಲಾ ಮಟ್ಟದ ಸಮಿತಿಗೆ ಶಿಫಾರಸ್ಸು ಮಾಡುವುದು
5) ಘಟಕಗಳಿಗೆ ಮಂಜೂರು ಮಾಡಬಹುದಾದ ಇತರೇ ಸವಲತ್ತುಗಳಿಗೆ ಜಿಲ್ಲಾ ಮಟ್ಟದ ಸಮಿತಿಗೆ ಶಿಫಾರಸ್ಸು ಮಾಡುವುದು.

ಸರ್ಕಾರದ ದಿ.05.12.2005 ರ ಕಛೇರಿ ಆದೇಶ ಸಂ.ಎಸ್‌ಎಸ್‌ಐ/ಐಇಓ/ಸಿಒಎನ್‌ಎಸ್‌ಟಿಎನ್‌ಸಿಇಎಲ್/ 2005-06ರಲ್ಲಿ ರೋಗಗ್ರಸ್ಥ ಕೈಗಾರಿಕೆಗಳ ಗುರ್ತಿಸುವಿಕೆ ಮತ್ತು ಪುನಶ್ಚೇತನಗೊಳಿಸುವ ಕಾರ್ಯವನ್ನು ಪರಿಣಾಮಕಾರಿಯಾಗಿ ಮತ್ತು ಯಶಸ್ವಿಯಾಗಿ ನಿರ್ವಹಿಸಲು ಕೋಶವೊಂದನ್ನು ತೆರೆದಿದ್ದು, ಜಂಟಿ ನಿರ್ದೇಶಕರು ಈ ಕೋಶದ ಮುಖ್ಯಸ್ಥರಾಗಿರುತ್ತಾರೆ. ಉಪ ನಿರ್ದೇಶಕಕರು ಹಾಗೂ ಸಹಾಯಕ ನಿರ್ದೇಶಕರು ಜಂಟಿ ನಿರ್ದೇಶಕರಿಗೆ ಕೆಲಸ ನಿರ್ವಹಣೆಯಲ್ಲಿ ಸಹಾಯಕರಾಗಿ ಕರ್ತವ್ಯ ನಿರ್ವಹಿಸುವರು.

**7. ವಿಶೇಷ ಘಟಕ ಯೋಜನೆ / ಗಿರಿಜನ ಉಪ ಯೋಜನೆ ಸಮಿತಿ.**

1) ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಚಿಕ್ಕಮಗಳೂರು — ಅಧ್ಯಕ್ಷರು
2)ಉಪ ನಿರ್ದೇಶಕರು (ಗ್ರಾಕೈ) ಜಿಲ್ಲಾ ಪಂಚಾಯಿತಿ, ಚಿಕ್ಕಮಗಳೂರು. — ಸದಸ್ಯರು
3)ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ, ಸಮಾಜ ಕಲ್ಯಾಣ ಇಲಾಖೆ — ಸದಸ್ಯರು
2) ಜಿಲ್ಲಾ ಮುನ್ನಡೆ ಬ್ಯಾಂಕ್ ವ್ಯವಸ್ಥಾಪಕರು, ಚಿಕ್ಕಮಗಳೂರು., — ಸದಸ್ಯರು
3) ವ್ಯವಸ್ಥಾಪಕರು, ಕೆ.ಎಸ್.ಎಫ್.ಸಿ. ಚಿಕ್ಕಮಗಳೂರು. — ಸದಸ್ಯರು
4) ಜಿಲ್ಲಾ ಅಧಿಕಾರಿಗಳು, ಖಾದಿ & ಗ್ರಾಮೋದ್ಯೋಗ ಮಂಡಳಿ
5) ಉಪ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಚಿಕ್ಕಮಗಳೂರು. — ಸದಸ್ಯ ಕಾರ್ಯದರ್ಶಿ

**ಸೆಕ್ಷನ್ 4 (ಬಿ) (ix) ಅಧಿಕಾರಿಗಳು ಮತ್ತು ನೌಕರರ ವಿವರಗಳು:–**

ಚಿಕ್ಕಮಗಳೂರು ಜಿಲ್ಲಾ ಕೈಗಾರಿಕಾ ಕೇಂದ್ರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ನೌಕರರ ವಿವರಗಳು ಈ ಕೆಳಕಂಡಂತಿರುತ್ತವೆ.

| ಕ್ರಮ ಸಂಖ್ಯೆ | ಅಧಿಕಾರಿ/ನೌಕರರ ಹುದ್ದೆಗಳ ವಿವರ | ಮಂಜೂರಾದ ಹುದ್ದೆಗಳ ಸಂಖ್ಯೆ | ಭರ್ತಿಯಾದ ಹುದ್ದೆಗಳ ಸಂಖ್ಯೆ | ಖಾಲಿಯಿರುವ ಹುದ್ದೆಗಳ ಸಂಖ್ಯೆ |
|---|---|---|---|---|
| 1 | ಜಂಟಿ ನಿರ್ದೇಶಕರು | 1 | 1 | – |
| 2 | ಉಪ ನಿರ್ದೇಶಕರು | 1 | 0 | 1 |
| 3 | ಸಹಾಯಕ ನಿರ್ದೇಶಕರು | 2 | 1 | 1 |
| 4 | ಕಛೇರಿ ಅಧೀಕ್ಷಕರು | 1 | 1 | – |
| 5 | ಪ್ರಥಮ ದರ್ಜೆ ಸಹಾಯಕರು | 1 | 0 | 1 |
| 6 | ಗಣತಿದಾರರು | 1 | 0 | 1 |
| 7 | ಶೀಘ್ರಲಿಪಿಗಾರರು | 1 | 0 | 1 |
| 8 | ಎರಡನೇ ದರ್ಜೆ ಸಹಾಯಕರು | 1 | 0 | 1 |
| 9 | ಬೆರಳಚ್ಚುಗಾರರು | 1 | 0 | 1 |
| 10 | ಡಿ ಸಮೂಹದ ನೌಕರರು | 2 | 0 | 2 |
| | ಒಟ್ಟು | 12 | 03 | 9 |

**ಸೆಕ್ಷನ್ 4 (1) ಬಿ (x) ಪ್ರಕಾರ ಪಡೆಯುವ ಪರಿಹಾರ ವ್ಯವಸ್ಥೆಯು ಸೇರಿದಂತೆ ಪ್ರತಿ ಅಧಿಕಾರಿ/ನೌಕರರು ಪಡೆಯುವ ಮಾಹೆಯಾನ ವೇತನದ ವಿವರಗಳು:–**

| ಕ್ರಮ ಸಂಖ್ಯೆ | ಅಧಿಕಾರಿ ನೌಕರರ ಹೆಸರು ಶ್ರೀಯುತರುಗಳಾದ | ಪದನಾಮ | ಪಡೆಯುತ್ತಿರುವ ಮಾಹೆಯಾನ ವೇತನ ರೂ.(ಭತ್ಯೆಗಳ ಸಹಿತ) |
|---|---|---|---|
| 1 | ಶ್ರೀ ಸಿದ್ದರಾಜು | ಜಂಟಿ ನಿರ್ದೇಶಕರು | 127717.00 |
| 2 | ಶ್ರೀ ಎನ್.ಚಂದ್ರಶೇಖರ್ | ಸಹಾಯಕ ನಿರ್ದೇಶಕರು | 72921.000 |
| 3 | ಸಿ. ಉಮಾ | ಅಧೀಕ್ಷಕರು | 73121.00 |

**ಸೆಕ್ಷನ್ 4 (1) (ಬಿ) (xi) ಅನುದಾನ ಹಂಚಿಕೆ, ಬಿಡುಗಡೆ ಪ್ರಸ್ತಾಪಿತ ಖರ್ಚು:–**

2019–20 ನೇ ಸಾಲಿನಲ್ಲಿ ಈ ಕಛೇರಿಗೆ ವಿವಿಧ ಶೀರ್ಷಿಕೆಗಳಡಿಯಲ್ಲಿ ಬಿಡುಗಡೆಯಾದ ಅನುದಾನ ಮತ್ತು 31.03.2020 ರವರೆಗೆ ಭರಿಸಿರುವ ವೆಚ್ಚದ ವಿವರ ಈ ಕೆಳಗಿನಂತಿದೆ.

(ರೂ.ಗಳಲ್ಲಿ)

| ಕ್ರಮ ಸಂಖ್ಯೆ | ವಿವರ | ಬಿಡುಗಡೆ ಮೊತ್ತ | ಖರ್ಚಾದ ಮೊತ್ತ | ಉಳಿಕೆ |
|---|---|---|---|---|
| 1 | 2851–00–102–0–14(ಯೋಜನೇತರ ವೇತನ) | 3440029.00 | 3440029.00 | 0 |
| 2 | 2851–00–102–0–14–033 (ದಿನಗೂಲಿ ನೌಕರರ ವೇತನ) | 700000.00 | 637334.00 | 62666.00 |
| 3 | 2851–00–102–0–14–034 (ಹೊರಗುತ್ತಿಗೆ ಗ್ರೂಪ್ ಡಿ ವೇತನ) | 210000.00 | 204903.00 | 5097.00 |
| 4 | 2851–00–102–0–14–052 ದೂರವಾಣಿ ವೆಚ್ಚ | 64000.00 | 48517.00 | 15483.00 |
| 5 | ಇತರೆ ವೆಚ್ಚ 2851–00–102–0–83–059 | 103000.00 | 95643.00 | 7357.00 |
| 6 | ಸಾಮಾನ್ಯ ವೆಚ್ಚ (051) | 130000.00 | 89284.00 | 40716.00 |
| 7 | 8658–00–102–5–17–000<br>2851–00–102–0–10–034 (ಹೊರಗುತ್ತಿಗೆ ಗಣತಿದಾರರ ವೇತನ) | 39400.00<br>250440.00 | 39400.00<br>247296.00 | 0<br>3144.00 |
| 8 | ಕಟ್ಟಡ ವೆಚ್ಚ (071) | 15000.00 | 0 | 15000.00 |
| 9 | 2851–00–102–0–14(195) ಸಾರಿಗೆ ವೆಚ್ಚ (195) | 370000.00 | 359150.00 | 10850.00 |
| 10 | 2851–00–102–0–14–ಪ್ರಯಾಣ ವೆಚ್ಚ (041) | 27000.00 | 0 | 27000.00 |
| 11 | 2851–00–102–0–83 (106) ಬಂಡವಾಳ ಹೂಡಿಕೆ ಸಹಾಯಧನ 12 ಘಟಕಗಳು | 10495000.00 | 10495000.00 | 0 |
| 12 | 2851–00–102–0–83 (106) ಬಡ್ಡಿ ಸಹಾಯಧನ 03 ಘಟಕಗಳು | 78367.00 | 78367.00 | 0 |
| 13 | 2401–00–102—028 (103) ಕರ್ನಾಟಕ ಕೃಷಿ ಆಹಾರ ಸಂಸ್ಕರಣಾ ನೀತಿ 2015 ಸಹಾಯಧನ 1 ಘಟಕ | 2000000.00 | 2000000.0 | 0 |
| 14 | 2851–00–102–0–83(106) ಸಿಎಂಇಜಿಪಿ ಸಹಾಯಹಧನ<br>ಡಿಐಸಿ 26 ಘಟಕಗಳು<br>(ಕೆವಿಐಬಿ) 05 ಘಟಕಗಳು<br>ಒಟ್ಟು 31 ಘಟಕಗಳು | <br>4557950.00<br>1351318.00<br>5909268.00 | <br>4557950.00<br>1351318.00<br>5909268.00 | <br>0<br>0<br>0 |
| 15 | 2851–00–102–0–83 (422) ವಿಶೇಷ ಘಟಕ ಯೋಜನೆ ಶೇ.60:40 03 ಘಟಕಗಳು | 1100000 | 937000 | 163000 (ಆದ್ಯರ್ಪಿಸಲಾಗಿದೆ) |

| | | | | |
|---|---|---|---|---|
| 16 | 2851–00–102–0–83 (422) ವಿಶೇಷ ಘಟಕ ಯೋಜನೆ ಪ.ಜಾ.ಇವರಿಗೆ ಅರಿವು ಮೂಡಿಸುವ ಕಾರ್ಯಕ್ರಮ | 28800 | 22200 | 512 |
| 17 | 2851–00–102–0–83 (423) ಗಿರಿಜನ ಉಪ ಯೋಜನೆ 01 ಘಟಕ | 300000 | 300000 | 0 |

**ಸೆಕ್ಷನ್ 4 (1) (ಬಿ) (xii) ಸಹಾಯಧನ ಕಾರ್ಯಕ್ರಮಗಳ ಅನುಷ್ಠಾನ ಹಾಗೂ ಅವುಗಳಿಗಾಗಿ ನಿಗದಿಗೊಳಿಸಿದ ಅನುದಾನ ಮತ್ತು ಫಲಾನುಭವಿಗಳ ವಿವರ:–**

2019–20ನೇ ಸಾಲಿನಲ್ಲಿ ದಿನಾಂಕ.31.03.2020ರ ಅಂತ್ಯದವರೆಗೆ ಕಾರ್ಯಗತಗೊಳಿಸಿದ ಯೋಜನೆ/ಕಾರ್ಯಕ್ರಮಗಳ ವಿವರ ಈ ಕೆಳಕಂಡಂತೆ ಇರುತ್ತದೆ.

**ಎ) ಬಂಡವಾಳ ಉತ್ತೇಜನ ಸಹಾಯಧನ:–**

2019–20ನೇ ಸಾಲಿನಲ್ಲಿ ಕೈಗಾರಿಕಾ ನೀತಿಯಡಿ ಹಿಂದಿನ ಸಾಲುಗಳಲ್ಲಿ ಬಂಡವಾಳ ಹೂಡಿಕೆ ಉತ್ತೇಜನ ಸಹಾಯಧನ ಮಂಜೂರು ಮಾಡಲಾದ ಒಟ್ಟು 09 ಘಟಕಗಳಿಗೆ ರೂ.59,95,000/– ಸಹಾಯಧನವನ್ನು ಬಿಡುಗಡೆ ಮಾಡಲಾಗಿದೆ.

2019–20ನೇ ಸಾಲಿನಲ್ಲಿ ಕೈಗಾರಿಕಾ ನೀತಿಯಡಿ ಬಡ್ಡಿ ಸಹಾಯಧನ ಮಂಜೂರು ಮಾಡಲಾದ ಒಟ್ಟು 03 ಘಟಕಗಳಿಗೆ ರೂ.78,367/– ಸಹಾಯಧನವನ್ನು ಬಿಡುಗಡೆ ಮಾಡಲಾಗಿದೆ.

2019–20ನೇ ಸಾಲಿನಲ್ಲಿ ಆಹಾರ ಮತ್ತು ಕೃಷಿ ಸಂಸ್ಕರಣಾ ನೀತಿ 2015ರಡಿ 01 ಘಟಕಕ್ಕೆ ರೂ.20,00,000/– ಸಹಾಯಧನವನ್ನು ಬಿಡುಗಡೆ ಮಾಡಲಾಗಿದೆ.

2019–20ನೇ ಸಾಲಿನಲ್ಲಿ 04 ಡಿಎಲ್‌ಸಿ ಸಭೆಗಳನ್ನು ನಡೆಸಿ ಒಟ್ಟು 11 ಘಟಕಗಳಿಗೆ ರೂ.1,10,82000/– ಸಹಾಯಧನ ಮಂಜೂರು ಮಾಡಲಾಗಿದೆ. ವಿವರ ಈ ಕೆಳಕಂಡಂತೆ ಇರುತ್ತದೆ.

1) ಮೆ: ಲಕ್ಷ್ಮಿರಂಗನಾಥ ಇಂಜಿನಿಯರಿಂಗ್ & ಸ್ಟೀಲ್ ಫರ್ನೀಚರ್ಸ್, ಯು.ಬಿ.ರಸ್ತೆ, ಕಡೂರು, ಶ್ರೀಮತಿ ಶೋಭ. ರೂ.3,36,000/–
2) ಮೆ: ಆರ್.ಕೆ. ಫರ್ನೀಚರ್ಸ್, ಕೋಟೆ, ಚಿಕ್ಕಮಗಳೂರು, ಶ್ರೀ ಡಿ.ಎನ್.ಕರುಣಾಕರ ನಾಯ್ಕ, ರೂ.1,94,000/–
3)ಮೆ:ನಿಸರ್ಗ ಬ್ರಿಕ್ಸ್, ಕೋಟೆ, ಬಸವನಹಳ್ಳಿ, ಶಿವಪುರ, ತರೀಕೆರೆ, ಶ್ರೀ ವಿ.ಚಂದ್ರಶೇಖರ್, ರೂ.2,92,000/–
4)ಮೆ:ಕಾವ್ಯ ಕಾಂಕ್ರೀಟ್ ಪ್ರಾಡಕ್ಟ್ಸ್, ನಾಗರಹಳ್ಳಿ, ಚಿಕ್ಕಮಗಳೂರು ತಾ. ಶ್ರೀಮತಿ ಎಸ್.ಕಾವ್ಯ ರೂ.25,00,000/–
5)ಮೆ:ರಾಘವೇಂದ್ರ ಇಂಜಿನಿಯರಿಂಗ್ ವರ್ಕ್ಸ್,ಹ್ಯಾಂಡ್‌ಪೋಸ್ಟ್, ಮೂಡಿಗೆರೆ, ಶ್ರೀ ರವಿ ರೂ.38,000/–
6)ಮೆ:ಶುಭಲಕ್ಷ್ಮಿ ಬಾಟ್ಲಿಂಗ್ ಕಂ.ಕೊಂಡುಗುಳಿ,ಕೊಪ್ಪ ತಾ.ಶ್ರೀಮತಿ ಶುಭಲಕ್ಷ್ಮಿ, ರೂ.3,93,000/–
7)ಮೆ:ಆಗ್ನೇಸ್ ಎಂಟರ್‌ಪ್ರೈಸಸ್, ಮತ್ತಾವರ, ಗವನಹಳ್ಳಿ, ಚಿಕ್ಕಮಗಳೂರು, ಶ್ರೀ ಸಿ.ಎಂ.ಜಾರ್ಜ್,ರೂ.10,29,000/–
8)ಮೆ: ಚನ್ನಬಸವೇಶ್ವರ ಪೇಪರ್ ಪ್ರಾಡಕ್ಟ್ಸ್, ಕೈಗಾರಿಕಾ ವಸಾಹತು, ಚಿಕ್ಕಮಗಳೂರು, ಶ್ರೀ ನಯನ ಕುಮಾರ್, ಕೆ.ಎಲ್. ರೂ.97,000/–
9)ಮೆ: ಕೆ.ಎಸ್.ಜಿ. ಸ್ಟೋನ್ ಕ್ರಷರ್, ನಾಗರಹಳ್ಳಿ, ಮರ್ಲೆ ಅಂಚೆ, ಚಿಕ್ಕಮಗಳೂರು ತಾ. ಶ್ರೀ ಕೆ.ಎಸ್. ಶಾಂತೇಗೌಡ, ರೂ. 30,00,000/–
10)ಮೆ:ಸಿ.ಹೆಚ್.ಆರ್.ಸ್ಟೋನ್ ಕ್ರಷರ್ & ಎಂ.ಸ್ಯಾಂಡ್, ಗಂಗನಹಳ್ಳಿ, ಚೌಳಹಿರಿಯೂರು, ಕಡೂರು ತಾ.

ಶ್ರೀ ಸಿ. ಹಾಲಪ್ಪ ರೂ. 30,00,000/-

11) ಮೆ:ಎಸ್.ಎಂ.ಎಸ್. ಪ್ರಿಂಟರ್ಸ್, ಕುವೆಂಪುನಗರ, ಹೌಸಿಂಗ್ ಬೋರ್ಡ್, ಮೂಡಿಗೆರೆ, ಶ್ರೀ ಎಸ್.ಎಂ.ಸೋಮಶೇಖರ್ ರೂ.2,03,000/-

**ಬಿ) ಬಡ್ಡಿ ಸಹಾಯಧನ:-**

1) ಮೆ: ನೇಚರ್ ಲೀಫ್ ಇಂಡಸ್ಟ್ರೀಸ್, ಬೈಪಾಸ್ ರಸ್ತೆ, ಚಿಕ್ಕಕುರುಬರಹಳ್ಳಿ, ಚಿಕ್ಕಮಗಳೂರು ತಾ. ಶ್ರೀ ಎಲ್.ವೈ. ಚಂದ್ರಕಲಾ. ರೂ.68,387/-
2) ಮೆ: ಸಣ್ಣಕ್ಕಿ ವೀರಭದ್ರೇಶ್ವರ ಫ್ಲೋರ್ ಮಿಲ್, ಬೈಪಾಸ್ ರಸ್ತೆ, ದೊಡ್ಡಕುರುಬರಹಳ್ಳಿ, ಚಿಕ್ಕಮಗಳೂರು ತಾ. ಶ್ರೀ ಡಿ.ಎಸ್. ಜಯಣ್ಣ. ರೂ.17,625/-

**ಸಿ) ಮುದ್ರಾಂಕ ಶುಲ್ಕ ವಿನಾಯಿತಿ:-**

ಪ್ರಸಕ್ತ ಸಾಲಿನಲ್ಲಿ ಈ ಕೆಳಕಂಡ 07 ಘಟಕಗಳಿಗೆ ಮುದ್ರಾಂಕ ಶುಲ್ಕ ವಿನಾಯಿತಿ ದೃಢೀಕರಣ ಪತ್ರ ನೀಡಲಾಗಿದೆ.

1) ಮೆ: ಮೆಟ್ ಕಮ್ ಪ್ರೊಡ್ಯೂಸರ್ಸ್, ಕೈಗಾರಿಕಾ ವಸಾಹತು, ಚಿಕ್ಕಮಗಳೂರು.
2) ಮೆ: ಶಕ್ತಿ ಇಂಡಸ್ಟ್ರೀಸ್, ಕೈಗಾರಿಕಾ ವಸಾಹತು, ಚಿಕ್ಕಮಗಳೂರು.
3) ಮೆ: ನಂದಾ ಟೈರ್ ರಿಟ್ರೇಡಿಂಗ್, ಕೆ.ಎಂ.ರಸ್ತೆ, ಸಖರಾಯಪಟ್ಟಣ ಕಡೂರು ತಾ.
4) ಮೆ: ಮಂಜುನಾಥ ಕಾಯರ್ ಪ್ರಾಡಕ್ಟ್ಸ್, ಕೈಗಾರಿಕಾ ವಸಾಹತು, ಬೀರೂರು, ಕಡೂರು ತಾ.
5) ಮೆ:ಸುಧನ್ವ ಇಂಡಸ್ಟ್ರೀಸ್, ಕೆ.ಆರ್.ಪೇಟೆ ರಸ್ತೆ, ಗವನಹಳ್ಳಿ, ಚಿಕ್ಕಮಗಳೂರು.
6) ಮೆ:ಬ್ಲೂಂ ಬಯೋಟೆಕ್, ಸರ್ವೇ ನಂ.259/1, ಬೀಕನಹಳ್ಳಿ-ಹಂಪಾಪುರ ಬೈಪಾಸ್, ಬೀಕನಹಳ್ಳಿ, ಚಿಕ್ಕಮಗಳೂರು.
7) ಮೆ: ವಿ.ಎಲ್. ಕಾಂಕ್ರೀಟ್ ಪ್ರಾಡಕ್ಟ್ಸ್, ಮಲ್ಲಿದೇವಿಹಳ್ಳಿ, ಯಗಟಿ ಹೋಬಳಿ, ಕಡೂರು ತಾ.

**ಡಿ) ಕರ್ನಾಟಕ ಕೃಷಿ ಮತ್ತು ಆಹಾರ ಸಂಸ್ಕರಣಾ ನೀತಿ-2015 ಅಡಿ ಬಂಡವಾಳ ಉತ್ತೇಜನ ಸಹಾಯಧನ:-**

1) ಮೆ: ಬನಶ್ರೀ ಅರೆಕಾ ಪ್ಲೇಟ್ ಪ್ರೊಡಕ್ಷನ್ಸ್, ಬಾಳೇಹಳ್ಳಿ, ಜ್ಯೋತಿನಗರ ಅಂಚೆ,ಚಿಕ್ಕಮಗಳೂರು. ಶ್ರೀಮತಿ ಸಿ.ವಿ. ಚೈತ್ರ ರೂ.1,85,000/-
2) ಮೆ: ಆರ್ಗಾನಿಕ್ ಎನರ್ಜಿ ಫುಡ್ಸ್, ಲಕ್ಷ್ಮಿಸಾಗರ, ದೇವನೂರು ಅಂಚೆ, ಕಡೂರು ತಾ. ಶ್ರೀ ಎಸ್.ಎಂ.ಮಂಜುನಾಥ ರೂ.65,00,000/-
3) ಮೆ: ಮಣಿಕಂಠ ಕಾಫಿ ಕ್ಯೂರಿಂಗ್ ವರ್ಕ್ಸ್, ನಿಡುವಾಳೆ, ಮೂಡಿಗೆರೆ ತಾ. ಪಾಲುದಾರರು: ಶ್ರೀ ಎನ್.ಎಸ್. ಸುಧಾಕರ. ರೂ.11,41,000/-

**ಇ) ಕರ್ನಾಟಕ ಕೃಷಿ ಮತ್ತು ಆಹಾರ ಸಂಸ್ಕರಣಾ ನೀತಿ-2015 - ಮುದ್ರಾಂಕ ಶುಲ್ಕ ವಿನಾಯಿತಿ:-**

1) ಮೆ: ಎಸ್.ಎಲ್.ಆರ್. ಕಾಫಿ ಕ್ಯೂರರ್ಸ್, ಕೋಳೂರು, ಬೆಟೆಗೆರೆ ಅಂಚೆ, ಮೂಡಿಗೆರೆ ತಾ.

**ಎಫ್) ಕರ್ನಾಟಕ ಕೃಷಿ ಮತ್ತು ಆಹಾರ ಸಂಸ್ಕರಣಾ ನೀತಿ-2015 - ವಿದ್ಯುತ್ ಶುಲ್ಕ ವಿನಾಯಿತಿ:-**

1) ಮೆ: ಆಲ್ ಅರೀಫ್ ಪೌಲ್ಟ್ರಿ ಕಂ. ಹ್ಯಾಚರೀಸ್ ಡಿವಿಜನ್, ಚಿಕ್ಕಪಟ್ಟಣಗೆರೆ, ಕಸಬಾ ಹೋಬಳಿ, ಕಡೂರು ತಾ.

**ಜಿ)ವಿಶೇಷ ಘಟಕ ಯೋಜನೆ ಶೇ.60:40 ಸಹಾಯಧನ:-**

1) ಸುಚಿತ್ರ ಇಂಡಸ್ಟ್ರೀಸ್, ಈದ್ಗಾನಗರ, ಕಡೂರು, ಶ್ರೀಮತಿ ಚಂದ್ರಮ್ಮ. ರೂ.3,37,000/-

2) ಮೆ: ವಿಷ್ಣು ಫ್ಲೋರ್ ಮಿಲ್, ತೊಂಡವಳ್ಳಿ, ಚಿಕ್ಕಮಗಳೂರು ತಾ. ಶ್ರೀ ಟಿ.ಬಿ. ಪರಮೇಶ ರೂ.,3.00,000/-
ಮೆ: ಶ್ರೀ ರಂಗನಾಥ್ ಪ್ರಸನ್ನ ಅರೇಕಾ ಲೀಫ್ ಪ್ಲೇಟ್ ಮ್ಯಾನುಫ್ಯಾಕ್ಚರಿಂಗ್ ಯುನಿಟ್, ಮಚ್ಚೇರಿ, ಕಡೂರು ತಾ. ಶ್ರೀ ಅನಂತ. ರೂ.,3.00,000/-

**ಹೆಚ್) <u>ಗಿರಿಜನ ಉಪ ಯೋಜನೆ ಶೇ.60:40 ಸಹಾಯಧನ:-</u>**

1) ಮೆ: ಶ್ರೀ ಲಕ್ಷ್ಮಿ ಅಡಿಕೆ ಸಂಸ್ಕರಣಾ ಘಟಕ, ದುಗ್ಲಾಪುರ, ಸ್ಟೇಷನ್ ದುಗ್ಲಾಪುರ ಅಂಚೆ, ತರೀಕೆರೆ ತಾ. ಶ್ರೀ ಈಶ್ವರ. ರೂ.,3.00,000/-

**<u>3) ಜಿಲ್ಲಾ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಗಳು:-</u>**

2019-20ನೇ ಸಾಲಿನಲ್ಲಿ ನಮ್ಮ ಜಿಲ್ಲೆಯಲ್ಲಿ 04 ಜಿಲ್ಲಾ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಯನ್ನು ಜರುಗಿಸಲಾಗಿದೆ.

**ಅ) ಜಿಲ್ಲಾ ಮಟ್ಟದ ಏಕ ಗವಾಕ್ಷಿ ಸಮಿತಿ ಸಭೆಯಲ್ಲಿ ಅನುಮೋದನೆಯಾದಂತಹ ಘಟಕಗಳ ವಿವರ:-**

| ಕ್ರ.ಸಂ. | ವರ್ಷ | ಅನುಮೋದನೆಗೊಂಡ ಯೋಜನೆಗಳು | | | ಅನುಷ್ಠಾನಗೊಂಡ ಘಟಗಳು | ಅನುಷ್ಠಾನ ಹಂತದಲ್ಲಿರುವುದು | ಕೈಬಿಟ್ಟ ಯೋಜನೆಗಳು |
|---|---|---|---|---|---|---|---|
| | | ಘಟಕಗಳು | ಬಂಡವಾಳ | ಉದ್ಯೋಗ | | | |
| 1 | 2012-13 | 10 | 2.32 | 116 | 0 | 10 | 0 |
| 2 | 2013-14 | 1 | 0.04 | 10 | 0 | 1 | 0 |
| 3 | 2014-15 | 2 | 0.19 | 11 | 0 | 2 | 0 |
| 4 | 2015-16 | 0 | 0 | 0 | 0 | 0 | 0 |
| 5 | 2016-17 | 4 | 1.82 | 82 | 3 | 0 | 1 |
| 6 | 2017-18 | 10 | 14.82 | 493 | 6 | 3 | 1 |
| 7 | 2018-19 | 02 | 11.10 | 888 | 1 | 1 | 0 |
| 8 | 2019-20 | 04 | 132.30 | 211 | 0 | 4 | 0 |
| | **ಒಟ್ಟು** | **33** | **162.79** | **11811** | **10** | **21** | **2** |

**ಆ) ರಾಜ್ಯ ಮಟ್ಟದ ಏಕ ಗವಾಕ್ಷಿ ಸಮಿತಿ ಸಭೆಯಲ್ಲಿ ಅನುಮೋದನೆಯಾದಂತಹ ಘಟಕಗಳ ವಿವರ:-**

| ಕ್ರ.ಸಂ. | ವರ್ಷ | ಅನುಮೋದನೆಗೊಂಡ ಯೋಜನೆಗಳು | | | ಅನುಷ್ಠಾನಗೊಂಡ ಘಟಗಳು | ಅನುಷ್ಠಾನ ಹಂತದಲ್ಲಿರುವುದು | ಕೈಬಿಟ್ಟ ಯೋಜನೆಗಳು |
|---|---|---|---|---|---|---|---|
| | | ಘಟಕಗಳು | ಬಂಡವಾಳ | ಉದ್ಯೋಗ | | | |
| 1 | 2009-10 | 1 | 9.77 | 235 | 1 | 0 | 0 |
| 2 | 2010-11 | 0 | 0 | 0 | 0 | 0 | 0 |
| 3 | 2011-12 | 4 | 64.75 | 554 | 0 | 1 | 3 |
| 4 | 2012-13 | 6 | 99.60 | 399 | 1 | 1 | 4 |
| 5 | 2013-14 | 0 | 0 | 0 | 0 | 0 | 0 |
| 6 | 2014-15 | 2 | 18.01 | 110 | 1 | 1 | 0 |
| 7 | 2015-16 | 1 | 28.98 | 75 | 0 | 1 | 0 |
| 8 | 2016-17 | 1 | 25.00 | 136 | 0 | 1 | 0 |
| | **ಒಟ್ಟು** | **5** | **246.11** | **1509** | **3** | **5** | **7** |

**ಇ) ರಾಜ್ಯ ಉನ್ನತ ಮಟ್ಟದ ಸಮಿತಿ ಸಭೆಯಲ್ಲಿ ಅನುಮೋದನೆಯಾದಂತಹ ಘಟಕಗಳ ವಿವರ:–**

| ಕ್ರ.ಸಂ. | ವರ್ಷ | ಅನುಮೋದನೆಗೊಂಡ ಯೋಜನೆಗಳು | | | ಅನುಷ್ಠಾನಗೊಂಡ ಘಟಗಳು | ಅನುಷ್ಠಾನ ಹಂತದಲ್ಲಿರುವುದು | ಕೈಬಿಟ್ಟ ಯೋಜನೆಗಳು |
|---|---|---|---|---|---|---|---|
| | | ಘಟಕಗಳು | ಬಂಡವಾಳ | ಉದ್ಯೋಗ | | | |
| 1 | 2009–10 | 1 | 95.00 | 592 | 0 | 1 | 0 |
| 2 | 2010–11 | 1 | 67.26 | 109 | 1 | 0 | 0 |
| | **ಒಟ್ಟು** | **2** | **162.26** | **701** | **1** | **1** | **0** |

**ಇ) ವಿಶೇಷ ಘಟಕ ಯೋಜನೆ / ಗಿರಿಜನ ಉಪಯೋಜನೆ:–**

2019–20ನೇ ಸಾಲಿಗೆ ವಿಶೇಷ ಘಟಕ ಯೋಜನೆ/ಗಿರಿಜನ ಉಪಯೋಜನೆಯಡಿ ಅನುಷ್ಠಾನಗೊಳಿಸಿದ ಕಾರ್ಯಕ್ರಮಗಳ ವಿವರ ಕೆಳಕಂಡಂತಿರುತ್ತದೆ.

| *ಕಾರ್ಯಕ್ರಮಗಳ ವಿವರ* | *ವಿಶೇಷ ಘಟಕ ಯೋಜನೆ* | | | | *ಗಿರಿಜನ ಉಪ ಯೋಜನೆ* | | | |
|---|---|---|---|---|---|---|---|---|
| | ಗುರಿ | | ಸಾಧನೆ | | ಗುರಿ | | ಸಾಧನೆ | |
| | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 1. ತರಬೇತಿ | 0 | 0 | 0 | 0 | 0 | 0 | 0 | 0 |
| 2.ವಸತಿ ಕಾರ್ಯಾಗಾರ | 4.00 | 04 | 0 | 04 | 0 | 0 | 0 | 0 |
| 3.ಸಣ್ಣ ಕೈಗಾರಿಕಾ ಘಟಕಗಳಿಗೆ ಶೇ.60 ಸಹಾಯಧನ | 11.00 | 03 | 9.37 | 03 | 3.00 | 01 | 3.00 | 01 |
| 4.ಅರಿವು ಮೂಡಿಸುವ ಕಾರ್ಯಕ್ರಮ | 0.228 | 01 | 0.2228 | 01 | 0 | 0 | 0 | 0 |

**ಸೆಕ್ಷನ್ 4 (1) (ಬಿ) (xv) ಸ್ವೀಕೃತವಾದ ರಿಯಾಯಿತಿಗಳು, ಪರವಾನಗಿಗಳು ಅಥವಾ ಮಂಜೂರು ಮಾಡುವ ಅಧಿಕಾರ ಪ್ರತ್ಯಯಗಳು:–**

2019–20 ನೇ ಪ್ರಸಕ್ತ ಸಾಲಿನಲ್ಲಿ ಒಟ್ಟು 560 ಘಟಕಗಳು ಉದ್ಯೋಗ್ ಆಧಾರ್ ಮೆಮೊರಂಡಂ ನೊಂದಣಿ ಮಾಡಿಕೊಂಡಿದ್ದು, ಸದರಿ ಘಟಕಗಳಲ್ಲಿ ರೂ. 10478.00 ಲಕ್ಷಗಳ ಬಂಡವಾಳ ಹೂಡಿಕೆ ಹಾಗೂ 2873 ಜನರಿಗೆ ಉದ್ಯೋಗಾವಕಾಶ ಕಲ್ಪಿಸಲಾಗಿದೆ.

ಕೈಗಾರಿಕಾ ನೀತಿ 2014–19ರನ್ವಯ 11 ಘಟಕಗಳಿಗೆ ಒಟ್ಟು ರೂ.1,10,82,000/– ಲಕ್ಷ ಸಹಾಯಧನ ಮಂಜೂರು ಮಾಡಲಾಗಿದೆ. 07 ಘಟಕಗಳಿಗೆ ಮುದ್ರಾಂಕ ಶುಲ್ಕ ವಿನಾಯಿತಿ ದೃಡೀಕರಣ ಪತ್ರ ನೀಡಲಾಗಿದೆ.

ಕೃಷಿ ಮತ್ತು ಆಹಾರ ಸಂಸ್ಕರಣಾ ನೀತಿ 2015ರಡಿ 03 ಕೈಗಾರಿಕಾ ಘಟಕಗಳಿಗೆ ರೂ.78,26,000/–ಗಳ, 01 ಘಟಕಕ್ಕೆ ಮುದ್ರಾಂಕ ಶುಲ್ಕ ವಿನಾಯಿತಿ, 01 ಘಟಕಕ್ಕೆ ವಿದ್ಯುತ್ ತೆರಿಗೆ ವಿನಾಯಿತಿ ನೀಡಲಾಗಿದೆ.

ವಿಶೇಷ ಘಟಕ ಯೋಜನೆ ಅಡಿ 03 ಸಣ್ಣ ಕೈಗಾರಿಕೆಗಳಿಗೆ ಗಿರಿಜನ ಉಪ ಯೋಜನೆಯಡಿ 01 ಸಣ್ಣ ಕೈಗಾರಿಕಾ ಘಟಕಕ್ಕೆ ಸಹಾಯಧನ ಬಿಡುಗಡೆ ಮಾಡಲಾಗಿದೆ.

**ಸೆಕ್ಷನ್ 4 (1) (ಬಿ) (xvi) :–**

ಈ ಕಛೇರಿಯಿಂದ ಅನುಷ್ಠಾನಗೊಳಿಸುತ್ತಿರುವ ಯೋಜನೆ ಮತ್ತು ಕಾರ್ಯಕ್ರಮಗಳ ಮಾಹಿತಿಯನ್ನು ಗಣಕೀಕರಿಸಲಾಗಿದೆ.

**ಸೆಕ್ಷನ್ 4 (1) (ಬಿ) (xvii). ಸಾರ್ವಜನಿಕೆ ಉಪಯೋಗಕ್ಕಾಗಿ ಮತ್ತು ಮಾಹಿತಿ ಪಡೆಯಲು ಲಭ್ಯವಿರುವ ವಾಚನಾಲಯಗಳು ಮತ್ತು ಗ್ರಂಥಾಲಯಗಳು ಮತ್ತು ಅವುಗಳ ಕೆಲಸದ ವೇಳೆ ವಿವರ:–**

ಕಛೇರಿಯಲ್ಲಿ ಮಾಹಿತಿ ಕೇಂದ್ರ ಮತ್ತು ಗ್ರಂಥಾಲಯವಿರುತ್ತದೆ. ಮಾಹಿತಿ ಕೇಂದ್ರ ಗ್ರಂಥಾಲಯವನ್ನು ಶೀಘ್ರಲಿಪಿಗಾರರು ನಿರ್ವಹಿಸುತ್ತಿದ್ದಾರೆ. ಕೈಗಾರಿಕೆಗಳಿಗೆ ಸಂಬಂಧಿಸಿದ ನಿಯತಕಾಲಿಕಗಳು ಮತ್ತು ಮ್ಯಾಗ್‌ಜೈನ್‌ಗಳು ಇರುತ್ತವೆ. ಸಾರ್ವಜನಿಕರು ಇದರ ಉಪಯೋಗ ಪಡೆದುಕೊಳ್ಳಬಹುದು. ವಾಚನಾಲಯ ಮತ್ತು ಗ್ರಂಥಾಲಯದ ವೇಳೆ ಕಛೇರಿ ವೇಳೆಯೇ ಆಗಿರುತ್ತದೆ.

**ಸೆಕ್ಷನ್ 4 (1) (ಬಿ) (xviii). ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರು, ಪದನಾಮ ಹಾಗೂ ಇತರೆ ವಿವರಗಳು:–**

ಚಿಕ್ಕಮಗಳೂರು ಜಿಲ್ಲಾ ಕೈಗಾರಿಕಾ ಕೇಂದ್ರದಲ್ಲಿ ಜಿಲ್ಲಾ ಮಟ್ಟದಲ್ಲಿ ಸಾರ್ವಜನಿಕ ಮಾಹಿತಿ ಅಧಿಕಾರಿ ಮತ್ತು ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ ಮತ್ತು ಮೇಲ್ಮನವಿ ಪ್ರಾಧಿಕಾರವನ್ನು ಕೆಳಕಂಡಂತೆ ನೇಮಿಸಲಾಗಿದೆ.

| ಕ್ರ ಸಂ | ಸಾರ್ವಜನಿಕ ಪ್ರಾಧಿಕಾರಿಗಳ ಕಛೇರಿ | ಸಾರ್ವಜನಿಕ ಮಾಹಿತಿ ಅಧಿಕಾರಿ | ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ | ಮೇಲ್ಮನವಿ ಪ್ರಾಧಿಕಾರ |
|---|---|---|---|---|
| 1 | ಜಂಟಿ ನಿರ್ದೇಶಕರವರ ಕಛೇರಿ, ಜಿಲ್ಲಾ ಕೈಗಾರಿಕಾ ಕೇಂದ್ರ, ಚಿಕ್ಕಮಗಳೂರು. | ಉಪ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಚಿಕ್ಕಮಗಳೂರು | ಸಹಾಯಕ ನಿರ್ದೇಶಕರು ಜಿಲ್ಲಾ ಕೈಗಾರಿಕಾ ಕೇಂದ್ರ, ಚಿಕ್ಕಮಗಳೂರು. | ಜಂಟಿ ನಿರ್ದೇಶಕರು ಜಿಲ್ಲಾ ಕೈಗಾರಿಕಾ ಕೇಂದ್ರ, ಚಿಕ್ಕಮಗಳೂರು. |

**ಸೆಕ್ಷನ್ 4 (1) (ಬಿ) (xix)**

ನಮೂದಿಸಬಹುದಾದ ಇತರ ಮಾಹಿತಿ ಯಾವುದೂ ಇರುವುದಿಲ್ಲ. ಮಾಹಿತಿಯನ್ನು ಪ್ರತೀ ವರ್ಷ ಪರಿಷ್ಕರಿಸಿ ನೀಡಲಾಗುವುದು.

**ಜಂಟಿ ನಿರ್ದೇಶಕರು,**
**ಜಿಲ್ಲಾ ಕೈಗಾರಿಕಾ ಕೇಂದ್ರ,**
**ಚಿಕ್ಕಮಗಳೂರು.**